ಅಚಲ

ಜೂನ್ 2001

ತಿಂಗಳ ಪತ್ರಿಕೆ

ಒಳಗೇನಿದೆ ?

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಅಚಲ

ಸಂಪುಟ - 16 ಸಂಚಿಕೆ - 6

ಸಂಪಾದಕ ಮಂಡಲಿ

ಎನ್. ಗಾಯತ್ರಿ

ನೇಮಿಚಂದ್ರ, ದೇವಿ,

ಬಿ. ಎನ್. ಸುಮಿತ್ರಾಬಾಯಿ

ಶಾಂತಾನಾಗರಾಜ್

ಹೆಚ್. ಎನ್: ಗೀತಾ

ಹೇಮಲತಾ ಮಹಿಷಿ

ಪ್ರಕಾಶಕರು

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10 ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು.

ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by
Dr. N. Gayathri

Published by
Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

ಆತ್ಮೀಯರೇ,

ಕಳೆದ 15 ವರ್ಷಗಳಿಂದಲೂ ತಾವುಗಳು ಪ್ರೀತಿ, ಅಭಿಮಾನದಿಂದ ಅಚಲ ಪತ್ರಿಕೆಯನ್ನು ನಿಮ್ಮದಾಗಿಸಿಕೊಂಡು ಪೋಷಿಸುತ್ತಾ ಬಂದಿರುತ್ತೀರಿ. ಮಹಿಳಾ ಚಳುವಳಿಯ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಇನ್ನೂ ಬೆಟ್ಟದಷ್ಟು ಕೆಲಸವಾಗಬೇಕಿದೆ. ಈ ಮಹತ್ತರ ಕಾರ್ಯದಲ್ಲಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಿದೆ. ನೀವೂ ಅಚಲ ಪತ್ರಿಕೆಯನ್ನು ನಿಮ್ಮ ವಿಚಾರಗಳ ವೇದಿಕೆಯನ್ನಾಗಿ ಮಾಡಿಕೊಳ್ಳಿ ಮತ್ತು ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವಲ್ಲಿ ನೆರವಾಗಿ.

ಯಾವುದೇ ವಿವರಗಳನ್ನು ಬರೆಯದ ಚಂದಾಹಣವು ಹಲವಾರು ಎಂ.ಓ.ಗಳಲ್ಲಿ ನಮಗೆ ತಲುಪಿದೆ. ಚಂದಾದಾರರು ದಯವಿಟ್ಟು ಎಂ.ಓ. ಫಾರ್ಮಿನ ಹಿಂಭಾಗದಲ್ಲಿ ವಿಳಾಸವನ್ನು ಬರೆಯಿರಿ.

ಅಚಲದ ಚಂದಾ ವಿವರಗಳು ಹೀಗಿವೆ :

ವಾರ್ಷಿಕ ಚಂದಾ : ರೂ. 40/- (ವ್ಯಕ್ತಿಗಳಿಗೆ)

ರೂ. 75/- (ಸಂಸ್ಥೆಗಳಿಗೆ)

ಅಜೀವ ಚಂದಾ : ರೂ. 300/- (ವ್ಯಕ್ತಿಗಳಿಗೆ)

ರೂ. 400/- (ಸಂಸ್ಥೆಗಳಿಗೆ)

ಗಮನಿಸಿ

ಅಚಲ ವಿಳಾಸ ಬದಲಾಗಿದೆ

108, ಸ್ಕೈಲೈನ್ ಸುರಭಿ, 14-ಬಿ, ವಿದ್ಯಾಪೀಠ ರಸ್ತೆ,
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಮೆಚ್ಚುಗೆ ಪಡೆದ ಮಹಿಳಾ ವಿಮಾನ ಚಾಲಕರು

1992ರಲ್ಲಿ ಮೊಟ್ಟಮೊದಲಿಗೆ ಭಾರತೀಯ ವಾಯುಸೇನೆ ತನ್ನ 60ನೇ ಹುಟ್ಟುಹಬ್ಬದಂದು ಮಹಿಳೆಯರಿಗೆ ಬಾಗಿಲು ತೆರೆಯಿತು. ಅಖಿಲ ಭಾರತದ ಮಟ್ಟದಲ್ಲಿ ಪುರುಷರೊಡನೆ ಸ್ಪರ್ಧಿಸಿ, ಮಹಿಳೆಯರು ಆಯ್ಕೆಯಾದರು. ಈ ಒಂಬತ್ತು ವರ್ಷಗಳಲ್ಲಿ ವಾಯುಸೇನೆಗೆ ಸೇರ್ಪಡೆಯಾದ ಮಹಿಳೆಯರು ತಮ್ಮ ಸಾಮರ್ಥ್ಯವನ್ನು ಮೆರೆದಿದ್ದಾರೆ.

ಇದೀಗ ಮಹಿಳೆಯರು ಭಾರತದ ವಾಯುಸೇನೆಯಲ್ಲಿ ಪ್ರಮುಖ ಪಾತ್ರವಹಿಸಲಿದ್ದಾರೆ. ವಾಯುಸೇನೆ ಮಹಿಳಾ ವಿಮಾನ ಚಾಲಕರ ಸೇವಾ ಅವಧಿಯನ್ನು ಹೆಚ್ಚಿಸುತ್ತಿದೆ. 'ಏರ್ ಆಫಿಸರ್ ಕಮಾಂಡಿಂಗ್ ಇನ್ ಚೀಫ್' ಆಗಿರುವ ಏರ್ ಮಾರ್ಷಲ್ ಟಿ. ಜಿ. ಮಾಸ್ಟರ್ ಮಹಿಳಾ ವಿಮಾನ ಚಾಲಕರ ಕಾರ್ಯ ನಿರ್ವಹಣೆ, ಸಾಮರ್ಥ್ಯವನ್ನು ನೋಡಿ ಪ್ರಭಾವಿತರಾಗಿ, 'ಇವರು ತಮ್ಮ ಪುರಷ ಸಹಚಾಲಕರಿಗಿಂತ ಹಾವ ರೀತಿಯಲ್ಲೂ ಕಡಮೆ ಇಲ್ಲ, ಮಹಿಳೆಯರ ಸೇವಾ ಅವಧಿಯನ್ನು ಹಿಗ್ಗಿಸಲಾಗುವುದು' ಎಂದು ತಿಳಿಸಿದ್ದಾರೆ. ಅಷ್ಟೇ ಅಲ್ಲ 'ವಾಯುಸೇನೆ ಎಲ್ಲ ರಾಂಕಗಳಲ್ಲಿಯೂ ಮಹಿಳೆಯರಿಗೆ ಬಾಗಿಲು ತೆರೆಯುವುದೆಂದೂ' ಹೇಳಿದ್ದಾರೆ.

ಇಂದು ವಾಯುಪಡೆಯಲ್ಲಿ ಸುಮಾರು 500 ಮಹಿಳಾ ಅಧಿಕಾರಿಗಳಿದ್ದಾರೆ, ಅವರಲ್ಲಿ ನೂರು ಮಂದಿ ವಿಮಾನ ಚಾಲಕರಾಗಿದ್ದು, ಸಾರಿಗೆ ವಿಮಾನ ಮತ್ತು ಹೆಲಿಕಾಪ್ಟರುಗಳನ್ನು ಹಾರಿಸುತ್ತಿದ್ದಾರೆ. ಮಹಿಲಾ ಚಾಲಕರು ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸಿದ್ದಾರೆ. ಅತ್ಯಂತ ಕಠಿಣ ತಾಣಗಳಾದ, ಹಿಮವತ್ಪರ್ವತಗಳ ನಡುವಿನ 'ಲೇ' ನಂತಹ ಸ್ಥಳದಲ್ಲೂ, ಅತ್ಯಂತ ಎತ್ತರದ ರಣ ಭೂಮಿ ಸಿಯಾಚಿನನಲ್ಲಿಯೂ ಮಹಿಳಾ ಚಾಲಕರು ಸಲೀಸಾಗಿ ವಿಮಾನವನ್ನು ಹಾರಿಸಿದ್ದಾರೆ, ಇಳಿಸಿದ್ದಾರೆ. ಮಹಿಳೆಯರ ಕಾರ್ಯ ಸಾಮರ್ಥ್ಯದ ಬಗ್ಗೆ ಮೆಚ್ಚಿನುಡಿಯುತ್ತಾ ಭಾರತೀಯ ವಾಯುಸೇನೆಯ ಮುಖ್ಯಸ್ಥರಾದ ಎ. ವೈ. ಟಿಪ್ನಿಸ್ 'ಮಹಿಳೆಯರಿಗೆ ವಾಯುಪಡೆಯಲ್ಲಿ ಖಚಿತ ಭವಿಷ್ಯವಿದೆ' ಎಂದು ಭರವಸೆ ನೀಡಿದ್ದಾರೆ. ಇಂದು ವಾಯುಪಡೆಯಲ್ಲಿರುವ ಮಹಿಳಾ ವಿಮಾನ ಚಾಲಕರು ಹತ್ತು ವರ್ಷದ ಸೇವಾ ಅವಧಿಯಲ್ಲಿದ್ದಾರೆ. ಇದನ್ನು ಮತ್ತೆ ಐದು ವರ್ಷಗಳಿಗೆ ಮುಂದುವರೆಸುವ ಅವಕಾಶ ಹೊಸ ಯೋಜನೆಯಡಿಯಲ್ಲಿ ಸಾಧ್ಯವಾಗುತ್ತಿದೆ. 'ಮಹಿಳಾ ಚಾಲಕರ ಜವಾಬ್ದಾರಿಯುತ ಹಾಗೂ ಪ್ರಬುದ್ಧ ನಡವಳಿಕೆ ಮಹಿಳೆಯರಿಗೆ ಸೇನೆಯಲ್ಲಿ ಹೆಚ್ಚು ಅವಕಾಶಕ್ಕೆ ಹಾದಿ ಮಾಡಿ ಕೊಟ್ಟಿದೆ. ಮಹಿಳೆಯರು ಮುಮದಾಳುತನದ ವಿಷಯದಲ್ಲೂ ಯಾವುದೇ ಲಿಂಗ ಸಮಸ್ಯೆಗಳು ಕಂಡು ಬಂದಿಲ್ಲ' ಎಂದು ಏರ್ ಮಾರ್ಷಲ್ ಮಾಷ್ಟರ್ ತಿಳಿಸಿದ್ದಾರೆ. 'ಮಹಿಳಾ ಅಧಿಕಾರಿಗಳಡಿ ದುಡಿಯಲು, ಅವರಿಂದ ಆಜ್ಞೆ ಪಡೆಯಲು ಯಾವ ಪುರುಷ ಅಧಿಕಾರಿಯೂ ಹಿಂತೆಗೆದಿಲ್ಲ. ಮಹಿಳೆಯರನ್ನು ಮುಂದಾಳಾಗಿ ಒಪ್ಪಿಕೊಳ್ಳಲು ಅವರಿಗೆ ಕಷ್ಟವಾಗಿಲ್ಲ' ಎಂದಿದ್ದಾರೆ.

ಹೀಗಿದ್ದೂ ಯುದ್ಧ ವಿಮಾನಗಳಿಗೆ, 'ಫೈಟರ್ ಪೈಲೆಟ್ ತರಪೇತಿ'ಗೆ ಮಹಿಳೆಯರಿಗೆ ಅವಕಾಶ ದಕ್ಕಿಲ್ಲ. ಭಾರತೀಯ ವಾಯುಸೇನೆ, ಇತರ ದೇಶಗಳಲ್ಲಿ ಯುದ್ಧ ವಿಮಾನಗಳನ್ನು ಹಾರಿಸುವ ಮಹಿಳಾ ಚಾಲಕರನ್ನು ಕುರಿತ ರಿಪೋರ್ಟುಗಳನ್ನು ಅಧ್ಯಯನ ಮಾಡ ಬಯಸುತ್ತಿದೆ. 'ಮಹಿಳೆಯರು ಯುದ್ಧ ವಿಮಾನ ಹಾರಿಸಬಲ್ಲರೆ, ಅದರಿಂದ ಅವರ ದೇಹದ ಮೇಲಾಗುವ ಪರಿಣಾಮವೇನು' ಎಂದು ತಿಳಿಯಬಯಸುತ್ತಿದೆ.

ಆದರೆ ಇಂತಹ ಅನುಮಾನ ಅನಗತ್ಯದ್ದು. ವೈಮಾನಿಕ ರಂಗಕ್ಕಾಗಲೀ, ವಾಯುಪಡೆಗಾಗಲೀ ಮಹಿಳೆ ಹೊಸಬಳಲ್ಲ. ಮೊಟ್ಟಮೊದಲ ವಿಮಾನ ಹಾರಿದ ದಶಕದಲ್ಲಿಯೆ, ವಿಮಾನ ಹಾರಿಸಿದ ಮಹಿಳೆಯರಿದ್ದಾರೆ. ವೈಮಾನಿಕ ಚರಿತ್ರೆಯ ಉದ್ದಕ್ಕೂ ಹೆಸರು ಮಾಡಿದ ಸಾಹಸಿಗಳಿದ್ದಾರೆ. ವಿಮಾನ ಚಾಲಕಿಯಾಗಿ ತರಬೇತುಗೊಂಡ ಮೊಟ್ಟಮೊದಲ ಬ್ರಿಟನ್ನಿನ ಮಹಿಳೆ ಹಿಲ್ಡಾ ಹ್ಯೂಲೆಟ್. ನೌಕಾಸೇನೆಗೆ ಸೇರಿದ್ದ ಈಕೆಯ ಮಗ 1911ರಲ್ಲಿ ಅಮ್ಮನಿಂದ ಹಾರುವುದನ್ನು ಕಲಿತ! ಆದರೆ 'ಇಂಟರ್ ನ್ಯಾಷನಲ್ ಕಮಿಷನ್ ಫಾರ್ ಏರ್ ನ್ಯಾವಿಗೇಷನ್' ಮಹಿಳೆಯರನ್ನು ವಾಣಿಜ್ಯ ಹಾರಾಟದಲ್ಲಿ ಪ್ರವೇಶಿಸುವಂತೆ ನಿಷೇಧಿಸಿತು. 1926ರಲ್ಲಿ ಸೋಫಿಯಾ ಹೀತ್ ಈ ನಿಷೇಧದ ವಿರುದ್ಧ ಹೋರಾಡಿ, ಮಹಿಳೆಯ ಸಾಮರ್ಥ್ಯವನ್ನು ಪ್ರದರ್ಶಿಸಿದಳು. ಮಹಿಳೆಯ ದೇಹರಚನೆಯನ್ನೇ ಅವಕಾಶ ವಂಚನೆಗೆ ನೆನಪಾಗಿ ಬಳಸುತ್ತಿದ್ದ ಕಾರಣ, ಈಕೆ ಹಾರಾಟದ ಲೈಸೆನ್ಸಿಗೆ ಅವಶ್ಯವಿದ್ದ ವೈದ್ಯಕೀಯ ಪರೀಕ್ಷೆ ಮತ್ತು ಸಾಮರ್ಥ್ಯದ ಪರೀಕ್ಷೆಗಳನ್ನು ತನ್ನ ಮುಟ್ಟಿನ ದಿನಗಳಲ್ಲಿ ತೆಗೆದುಕೊಂಡು ಉತ್ತೀರ್ಣಳಾದಳು!

ಮಹಿಳೆ ಯುದ್ಧ ರಂಗಕ್ಕೆ, ಯುದ್ಧ ವಿಮಾನಗಳಿಗೂ ಹೊಸಬಳಲ್ಲ. ಹಾರಾಟದ ಒಲವು ಮಹಿಳೆಯರನ್ನು ವೈಮಾನಿಕ ರಂಗಕ್ಕೆ ಆಕರ್ಷಿಸಿತ್ತು. ಮಹಾಯುದ್ಧ ಆರಂಭವಾದಾಗ ಹವ್ಯಾಸಿ ಮಹಿಲಾ ಹಾರಾಟಗಾರ್ತಿಯರನ್ನು ತಟ್ಟನೆ ಯುದ್ಧದಲ್ಲಿ ವಿಮಾನಗಳನ್ನು ಸ್ಥಲಾಂತರಿಸಲು, ಯೋಧರನ್ನು ಕೊಂಡೊಯ್ಯಲು ಬಳಸಿಕೊಂಡರು.

1918ರಲ್ಲಿಯೇ 'ರಾಯಲ್ ಏರ್ ಫೋರ್ಸ್'ನ ಮಹಿಲಾ ಪಡೆ ರೂಪುಗೊಂಡಿತ್ತು. 32,000 ಮಹಿಳೆಯರು ಈ ವಾಯುಸೇನೆಯಲ್ಲಿ ಸೇವೆ ಸಲ್ಲಿಸಿದರು. 1920ರಲ್ಲಿ 'ಮಹಿಲೆಯರಿಗೆ ಸೇನೆಗೆ ಪ್ರವೇಶ ಕೂಡದು' ಎಂಬ ನೀತಿ ತಂದು, ಈ ಪಡೆಯನ್ನು ತೆಗೆದುಹಾಕಲಾಗಿತ್ತು. 1938ರ ಹೊತ್ತಿಗೆ ಎರಡನೇ ಮಹಾಯುದ್ಧದ ಮೋಡಗಳು ಕವಿದಾಗ, ಐರೋಪ್ಯ ದೇಶಗಳು ತಮ್ಮ ನೀತಿಯನ್ನು ಬದಲಿಸಿ, ಮಹಿಳೆಯರಿಗೆ ಬಾಗಿಲು ತೆರೆದವು. ಆದಾಗ ವಾಯುಸೇನೆಯಲ್ಲಿ 2000 ಇದ್ದ ಮಹಿಳೆಯರ ಸಂಖ್ಯೆ 1943ರ ಹೊತ್ತಿಗೆ 1,82,000 ಕ್ಕೆ ಏರಿತ್ತು! ಈ ಮಹಿಳಾ

ಸೇನೆ ಬ್ರಿಟನಿನ್ನ ವಾಯುಸೇನೆಯ ಬಹುಮುಖ್ಯ ಭಾಗವಾಗಿತ್ತು. ಇವರಲ್ಲಿ ಅನೇಕರಿಗೆ ವೀರತನದ 'ಸೇನೆಯ ಪದಕ'ಗಳನ್ನು ಕೊಟ್ಟು ಗೌರವಿಸಿದ್ದರು.

ಸೋವಿಯತ್ ಒಕ್ಕೂಟದಲ್ಲಿ ಮಹಿಳೆಯರು ನೇರವಾಗಿ ಶತ್ರುಪಡೆಯೊಡನೆ ಹೋರಾಟದಲ್ಲಿ ಭಾಗವಹಿಸಿದರು. ಯುದ್ಧದ ಆರಂಭದಲ್ಲಿಯೇ 'ರೆಡ್ ಏರ್ ಫೋರ್ಸ್'ಗೆ ಸೇರಿದ ಇಬ್ಬರು ಮಹಿಲಾ ಬಾಂಬರ್ ವಿಮಾನದ ಚಾಲಕಿಯರು, ಪುರುಷ ತಂಡದೊಡನೆಯೇ ಸೇವೆ ಸಲ್ಲಿಸಿದರು. ಎರಡನೆಯ ಸೇನಾಧಿಕಾರಿ ಲಿಡಿಯಾ ಲಿತ್ವಾಕ್ 73ನೇ ಫೈಟರ್ ಏರ್ ರೆಜಿಮೆಂಟ್‌ನಲ್ಲಿ ಸದಸ್ಯಳಾಗಿದ್ದು, ತನ್ನ ಯಾಕ್-1 ಮಿಲಿಟರಿ ವಿಮಾನದಲ್ಲಿ 130 ಹೊರದಾಳಿಗಳನ್ನು (ಸಾರ್ಟಿ) ನಡೆಸಿ, 12 ಅಧಿಕೃತ ದಿಗ್ವಿಜಯಗಳನ್ನು ಗಳಿಸಿದಾಕೆ. ಸೋವಿಯತ್ ಒಕ್ಕೂಟದ 'ಮೀರಿ ಮಹಿಳೆ' ಎನಿಸಿದ ಈಕೆ ತನ್ನ 22ನೇ ವಯಸ್ಸಿನಲ್ಲೆ, ಯುದ್ಧದಲ್ಲಿ ಮಡಿದಳು. ಯುದ್ಧ ಮುಂದುವರೆದಂತೆ, ಜರ್ಮನ್ನಿನ ದಾಳಿಯಿಂದ ಬಹು ಸಂಖ್ಯೆಯಲ್ಲಿ ವಿಮಾನ ಚಾಲಕರನ್ನು ಕಳೆದುಕೊಂಡಿದ್ದ ರಷಿಯಾಗೆ ಅತ್ಯಗತ್ಯವಾಗಿ ವಿಮಾನ ಚಾಲಕರು ಬೇಕಿದ್ದರು. ಇಂಥಾ ತುರ್ತು ಸಮಯದಲ್ಲಿ ಅಧಿಕ ಸಂಖ್ಯೆಯಲ್ಲಿ ಹಾರಾಟದ ತರಬೇತು ಪಡೆದ ಮಹಿಳಾ ಚಾಲಕಿಯರಿದ್ದರು. ಅವರೆಲ್ಲರನ್ನು ದಂಡಿಗೆ ಸೇರಿಸಿಕೊಳ್ಳಲಾಯಿತು.

1941ರ ಹೊತ್ತಿಗೆ ಮಹಿಳೆಯರು ಸೇನೆಗೆ ಸೇರಿದ್ದರು. ವೀರ ಮಹಿಳೆ ಮರೀನಾ ರಸ್ಕೋವಗೆ ಮಹಿಳಾ 'ಏರ್ ರೆಜಿಮೆಂಟ್' ನಿರ್ಮಿಸಲು ಕರೆ ನೀಡಲಾಗಿತ್ತು. ಈಕೆ 1942ರಲ್ಲಿ ಮೂರು ಮಹಿಳಾ ಪಡೆಗಳನ್ನು ಸಿದ್ಧ ಮಾಡಿದಳು. 587ನೇ 'ಫೈಟರ್ ಏರ್ ರೆಜಿಮೆಂಟ್', 587 'ಬಾಂಬರ್ ಏರ್ ರೆಜಿಮೆಂಟ್' ಮತ್ತು 588ನೇ ರಾತ್ರಿ ಬಾಂಬ್ ಹಾಕಬಲ್ಲ 'ನೈಟ್ ಬಾಂಬರ್ ಏರ್ ರೆಜಿಮೆಂಟ್'.

ಮಹಿಲಾ ಪಡೆಗಳು ಎಲ್ಲಿಲ್ಲದ ಸಾಹಸದಿಂದ ಹೋರಾಡಿದವು. ನೇರವಾಗಿ ಯುದ್ಧದ ತರಪೇತು, ಅನುಭವಗಳಿಲ್ಲದಿದ್ದರೂ, ದೇಶದ ತುರ್ತು ಸಮಯದಲ್ಲಿ ಯುದ್ಧರಂಗಕ್ಕೆ ಧುಮುಕಿದ ಈ ಪಡೆಗಳು ಎಲ್ಲಿಲ್ಲದ ಸಾಹಸ ತೋರಿದವು. ಈ ಯುದ್ಧದಲ್ಲಿ ಸತ್ತವರೆಷ್ಟೋ ಮಂದಿ. ಮೇಜರ್ ಎವ್ಡೋಕಿಯ ಬೆರ್ಶಾನ್ ಸ್ಕಯಳ ಪಡೆ 24,000 ಹೊರದಾಳಿಗಳನ್ನು ಹಾರಿಸಿ 23,000 ಟನ್ ಬಾಂಬನ್ನು ಒಗೆದಿತ್ತು. 23 'ವೀರ ಮಹಿಳಾ' ಪುರಸ್ಕಾರ ದೊರೆತ ಪಡೆ ಇದು.

ಇಷ್ಟೆಲ್ಲ ಅದ್ಭುತ ಇತಿಹಾಸವಿರುವಾಗ, ಭಾರತೀಯ ವಾಯುಸೇನೆ ಮಹಿಳೆಯರಿಗೆ 'ಫೈಟರ್ ಪೈಲೆಟ್' ತರಪೇತು ನೀಡಲು ಅನುಮಾನಿಸುವ ಅಗತ್ಯವಿಲ್ಲ. ಮಹಿಳಾ ಚಾಲಕರ ಸಾಮರ್ಥ್ಯವನ್ನು ಮುಕ್ತ ಮನಸ್ಸಿನಿಂದ ಮೆಚ್ಚಿರುವ ವಾಯುಸೇನೆ, ಯುದ್ಧ ವಿಮಾನಗಳನ್ನು ಹಾರಿಸುವ ಅವಕಾಶವನ್ನು ಮಹಿಳೆಯರಿಗೆ ಶೀಘ್ರದಲ್ಲೇ ನೀಡುವುದೆಂದು ಆಶಿಸೋಣ.

- ನೇಮಿಚಂದ್ರ

ವಂದನೆ

★ ಚಿಕ್ಕನಾಯಕನ ಹಳ್ಳಿಯ ಶ್ರೀಮತಿ ಎನ್. ಇಂದಿರಮ್ಮರವರು ಅಚಲಾ ಪತ್ರಿಕಗೆ ಇಪ್ಪತ್ತೈದು ಚಂದಾದಾರರನ್ನು ಮಾಡಿಸಿಕೊಟ್ಟು ನಮ್ಮ ಓದುಗರ ಬಳಗವನ್ನು ವಿಸ್ತರಿಸಿದ್ದಾರೆ.

★ ಕೋಲಾರದ ಶ್ರೀ ಆರ್. ಶಿವಪ್ಪನವರು ಅಚಲಾ ಪತ್ರಿಕೆಗೆ ಹತ್ತು ಚಂದಾದಾರರನ್ನು ಮಾಡಿಕೊಟ್ಟು ಸಹಕರಿಸಿದ್ದಾರೆ.

★ ಶ್ರೀ ಟಿ. ಶ್ರೀನಿವಾಸರಾಜುರವರು 'ಅಚಲ' ಪತ್ರಿಕೆ ರೂ 500/-ರ ದೇಣಿಗೆಯನ್ನು ನೀಡಿ ಉಪಕರಿಸಿದ್ದಾರೆ.

- ಅಚಲಾದ ಈ ಎಲ್ಲ ಹಿತೈಷಿಗಳಿಗೆ ಸಂಪಾದಕ ಮಂಡಲಿ ತುಂಬು ಹೃದಯದ ವಂದನೆಗಳನ್ನು ಅರ್ಪಿಸುತ್ತದೆ.

ಜಾಗತೀಕರಣ ಮತ್ತು ಮಹಿಳಾ ಆರೋಗ್ಯ

ಭಾರತದಲ್ಲಿ ಮಹಿಳೆಯರ ಆರೋಗ್ಯ ಪುರುಷರಿಗೆ ಹೋಲಿಸಿದಲ್ಲಿ ಹೀನಸ್ಥಿತಿಯಲ್ಲಿದೆಯೆಂದು ಅಧ್ಯಯನಗಳಿಂದ ತಿಳಿದುಬಂದಿದೆ (ಎಫ್. ಆರ್. ಸಿ. ಎಚ್) ಮಹಿಳೆಯ ಆರೋಗ್ಯ ಶಿಶುಮರಣ ಸಂಖ್ಯೆಯ ಮೇಲೂ ಪ್ರಭಾವ ಬೀರಿದೆ. ಆರೋಗ್ಯ ನೀತಿ ಮಹಿಳೆಯ ಹಾಗೂ ಮಕ್ಕಳ ಆರೋಗ್ಯಕ್ಕೆ ಮಲತಾಯಿ ಧೋರಣೆಯನ್ನು ತೋರಿಸಿದೆ.

ಮಹಿಳಾ ಅನಾರೋಗ್ಯಕ್ಕೆ ಕಾರಣಗಳು

ಸಾಮಾಜಿಕ ಸ್ಥಾನಮಾನ

ಶಿಕ್ಷಣ

ಕೆಲಸದ ಒತ್ತಡ / ವಿಶ್ರಾಂತಿ ಇಲ್ಲದಿರುವುದು

ನ್ಯೂನ ಪೋಷಿಕ

ಮೇಲಿಂದ ಮೇಲೆ ಗರ್ಭಧಾರಣೆ

ಅಸಂಘಟಿತ ಕ್ಷೇತ್ರದಲ್ಲಿ ಕೆಲಸ, ಶೋಷಣೆ

ಔದ್ಯೋಗಿಕ ಕಂಟಕಗಳು

ಚಿಕಿತ್ಸಾ ಸೌಲಭ್ಯ ಇಲ್ಲದಿರುವುದು

ದೈಹಿಕ ಹಾಗೂ ಮಾನಸಿಕ ಹಿಂಸೆ

ಇವೆಲ್ಲ ಕಾರಣಗಳಿಗಿಂತ ಹೆಚ್ಚು ಅಪಾಯಕಾರಿ ಸುಲಭವಾಗಿ ಗುರುತಿಸಲು ಸಾಧ್ಯವಲ್ಲದ ಇನ್ನೊಂದು ಕಾರಣ ಕಳೆದ ಒಂದು ದಶಕದಿಂದ ಭಾರತ ಹಾಗೂ ಇತರೇ ದೇಶಗಳಲ್ಲಿ ಕಂಡು ಬರುತ್ತಿದೆ. ಅದೇ ಜಾಗತೀಕರಣ ನೀತಿ. ಜಾಗತೀಕರಣ ಈಗಿರುವ ಅನಾರೋಗ್ಯದ ಕಾರಣಗಳನ್ನು ಉಲ್ಬಣಗೊಳಿಸುತ್ತದೆ.

ಏನಿದು ಜಾಗತೀಕರಣ ನೀತಿ?

ಜಗತ್ತಿನ ರಾಷ್ಟ್ರಗಳು ವ್ಯಾಪಾರದ ಬಗ್ಗೆ ತಮ್ಮದೇ ಆದ ನೀತಿಯನ್ನು ಪರಿಪಾಲಿಸುತ್ತ ಬಂದು ಸ್ವಾವಲಂಬನೆ ಸಾಧಿಸುತ್ತ ಬಂದಿದೆ. ಆದರೆ ಜಾಗತೀಕರಣ ನೀತಿ ಮುಕ್ತ ವ್ಯಾಪಾರವನ್ನು ಪ್ರೋತ್ಸಾಹಿಸುತ್ತದೆ. ಸರಕಾರದ ನಿಯಂತ್ರಣವಿಲ್ಲದ ಮಾರುಕಟ್ಟೆ ಜಾರಿಗೆ ತರುವುದು ಈ ಜಾಗತೀಕರಣದ ಉದ್ದೇಶವಾಗಿದೆ. ಇದರಿಂದ ಪೈಪೋಟಿ ಉಂಟಾಗಿ ಬಲಶಾಲಿಯೇ ಹೆಚ್ಚು ಲಾಭಗಳಿಸುವ ಸಾಧ್ಯತೆ ಇದೆ. ಇದು ಬಡರಾಷ್ಟ್ರಗಳಿಗೆ ಅಪಾಯ ಉಂಟುಮಾಡುವ ಸಾಧ್ಯತೆ ಇದೆ. ಇದರ ಪರಿಣಾಮವಾಗಿ ಜಾಗತಿಕ ಮಾರುಕಟ್ಟೆಯ ಆರ್ಥಿಕತೆಗೆ ಭಾರತವು ಮತ್ತಷ್ಟು ತೆರೆದು ಕೊಳ್ಳತೊಡಗಿದೆ. ಉತ್ತರ ಅಮೇರಿಕ, ಯುರೋಪ ಮತ್ತೂ ಜಪಾನ್ ದೇಶಗಳೊಂದಿಗೆ ಮಾರುಕಟ್ಟೆ ಮಾಡುತ್ತ ಬಂದರೆ ನಾವೂ ಶ್ರೀಮಂತರಾಗಿ ಬಿಡಬಹುದು ಎಂಬ ಭ್ರಮೆ ಹುಟ್ಟಿಸಲಾಗುತ್ತಿದೆ. ಈ ಹುಸಿಗನಸಿನ ಮಾರಾಟದೊಂದಿಗೆ ಬಡದೇಶಗಳ ಸಂಪನ್ಮೂಲಗಳನ್ನು ದೋಚುವ ಉದ್ದೇಶ ಈ ಜಾಗತೀಕರಣ ನೀತಿಗಿದೆ ಎಂಬುದನ್ನು ಎಲ್ಲರೂ ತಿಳಿಯಬೇಕಾಗಿದೆ.

ವಸಹಾತುಶಾಹಿ ನೀತಿ ಶ್ರೀಮಂತ ರಾಷ್ಟ್ರಗಳಿಗೆ ವರವಾಗಿತ್ತು. ಕಳೆದ ಶತಮಾನದ ಮಧ್ಯದ ಹೊತ್ತಿಗೆ ಅನೇಕ ರಾಷ್ಟ್ರಗಳು ಸ್ವಾತಂತ್ರ್ಯ ಪಡೆದದ್ದರಿಂದ, ಶ್ರೀಮಂತ ರಾಷ್ಟ್ರಗಳು ತಮ್ಮ ವಸಹಾತುಗಳಿಂದ ಕೊಳ್ಳೇ ಹೊಡೆಯುವ ಸಾಧ್ಯತೆ ಕಡೆಮೆಯಾಗಿದ್ದರಿಂದ, ಹೊಸ ನೀತಿಯನ್ನು ಅನುಸರಿಸಲು ಪ್ರಾರಂಭಿಸಬೇಕಾಯಿತು. ಇದಲ್ಲದೆ ತಮ್ಮ ಉತ್ಪಾದನೆಗೆ ಮಾರುಕಟ್ಟೆ ಹುಡುಕುವ ಅವಶ್ಯಕತೆ ಕಂಡು ಬಂತು. ರಾಷ್ಟ್ರೀಯ ಗಡಿಗಳನ್ನು ಮೀರಿ ಬೆಳೆದ ಬಹುರಾಷ್ಟ್ರೀಯ ಕಂಪನಿಗಳು ಆಸ್ಫೋಟದ ಹಂತ ತಲುಪಿದ್ದರಿಂದ ಜಾಗತೀಕರಣ ಅವಶ್ಯಕತೆ ಕಂಡು ಬಂದಿತು.

ಇಂತಹ ಪರಿಸ್ಥಿತಿಯಲ್ಲಿ ಅಭಿವೃದ್ಧಿದೇಶಗಳ ಆರ್ಥಿಕತೆ ಕುಸಿದಿದ್ದರಿಂದ ಈ ದೇಶಗಳು ಬಡದೇಶಗಳಲ್ಲಿ ಹಣ ಹೂಡಲು ಪ್ರಾರಂಭಿಸಿದವು. ಅಭಿವೃದ್ಧಿದೇಶಗಳ ಪ್ರತಿನಿಧಿಗಳಾದ ಐ. ಎಮ್. ಎಫ್. ಹಾಗೂ ವಿಶ್ವಬ್ಯಾಂಕ್ ಸಂಸ್ಥೆಗಳು, ಬಡದೇಶಗಳಿಗೆ ಸಾಲ ಕೊಡುತ್ತ ಬಂದು ಅವುಗಳನ್ನು ಪರಾವಲಂಬಿಗಳಾಗುವಂತೆ ಮಾಡಿವೆ. ಈ ಹಂತದಲ್ಲಿ ಅನೇಕ ಶರತುಗಳನ್ನು ಹಾಕಿ ತಮ್ಮ ಉತ್ಪಾದನೆಗೆ, ಮಾರುಕಟ್ಟೆ ಕಲ್ಪಿಸುತ್ತ, ಬಂಡವಾಳ ಶಾಹಿ ನೀತಿಯನ್ನು ಮುಂದುವರಿಸುತ್ತ, ಜಾಗತೀಕರಣ ನೀತಿಯನ್ನು ಸ್ಥಾಪಿಸಲು ಪ್ರಯತ್ನಿಸುತ್ತಿವೆ. ಈ ಜಾಗತೀಕರಣ ನೀತಿ ಕೇವಲ ಶ್ರೀಮಂತ ರಾಷ್ಟ್ರಗಳಿಗೆ ಲಾಭದಾಯಕವಾಗಿದೆ.

ಜಾಗತೀಕರಣ ಉದಾರೀಕರಣ ಹಾಗೂ ಖಾಸಗೀಕರಣ ನೀತಿಯನ್ನು ಒಳಗೊಂಡಿದೆ. ಎಲ್ಲ ರಾಷ್ಟ್ರಗಳು ಆರ್ಥಿಕತೆಯನ್ನು ತಮ್ಮ ಅಭಿವೃದ್ಧಿಗೆ

ಬೇಕಾದಂತೆ ಬದಲಾವಣೆಮಾಡುವುದು ಅಗತ್ಯವಾಗುತ್ತದೆ. ಆದರೆ ಅದನ್ನು ಹೊರದೇಶಗಳಿಗೆ ತೆರೆದಿಡುವುದು ಹೊರದೇಶಗಳ ಪೈಪೋಟಿ ಎದುರಿಸುವ ಸಾಮರ್ಥವಿಲ್ಲದಿದ್ದರೂ ಎದುರಿಸಲು ಮುಂದಾಗುವುದು ವಿನಾಶಕ್ಕೆ ಕಾರಣವಾಗುತ್ತದೆ. ಈ ರಾಜಕೀಯ ಬೆಳವಣಿಗೆಗೆ ರಾಷ್ಟ್ರದ ಆಳುವ ವರ್ಗಗಳು ಮಾತ್ರ ಪ್ರೋತ್ಸಾಹ ಕೊಡುತ್ತ ಬಂದು, ಜನಸಾಮಾನ್ಯರನ್ನು ಕತ್ತಲೆಯಲ್ಲಿ ಇಡಲಾಗಿದೆ. ಜಾಗತೀಕರಣ ಲಾಭದಾಯಕವಾಗುತ್ತದೆ ಎಂದು ಹೇಳುತ್ತ ಬಂದ ಈ ಸರಕಾರಗಳು, ತಮ್ಮ ವೈಯಕ್ತಿಕ ಲಾಭದೆಡೆಗೆ ಗಮನಕೊಡುತ್ತವೆ.

ಆರೋಗ್ಯ ಕ್ಷೇತ್ರದ ಮೇಲೆ ಹಾಗೂ ಮಹಿಳೆಯ ಆರೋಗ್ಯದ ಮೇಲೆ ಪರಿಣಾಮ

ದೇಶದಲ್ಲಿ ಬಡತನ ಹೆಚ್ಚುತ್ತಿದೆ. ಇದರ ಪರಿಣಾಮವಾಗಿ ನ್ಯೂನ ಪೋಷಣೆ ಹೆಚ್ಚುತ್ತದೆ ಹಾಗೂ ಶಿಶುಮರಣ ಸಂಖ್ಯೆ ಹೆಚ್ಚುತ್ತ ಹೋಗುತ್ತದೆ.

ಜಗತ್ತಿನಲ್ಲಿ ಬಡವರ ಸಂಖ್ಯೆ

ಬಡವರ ಸಂಖ್ಯೆ ಮಿಲಿಯನ್‌ಗಳಲ್ಲಿ

	1985	1990
ಎಲ್ಲ ಅಭಿವೃದ್ಧಿ ಶೀಲಗಳು	1051	1133
ದಕ್ಷಿಣ ಆಫ್ರಿಕಾ	532	562
ಪೂರ್ವ ಏಶಿಯಾ	182	169
ಉಪಸಹಾರ ಆಫ್ರಿಕಾ	184	216
ಮಧ್ಯ ಪೂರ್ವ ಮತ್ತು ಉತ್ತರ ಆಫ್ರಿಕಾ	60	73
ಪೂರ್ವ ಯೂರೋಪ್	5	5
ಲ್ಯಾಟಿನ್ ಅಮೇರಿಕ, ಅರೆಬಿಯನ್	87	108

ಮಾನವ ಅಭಿವೃದ್ಧಿ ವರದಿ 1993

★ ಆರೋಗ್ಯ ಪಾಲನೆಗೆ ನೈರ್ಮಲ್ಯ, ಕುಡಿಯುವ ನೀರು ಆಹಾರ, ಶಿಕ್ಷಣ ಇತ್ಯಾದಿಗಳು ಪ್ರಮುಖವಾಗುತ್ತವೆ. ಇವುಗಳನ್ನು ಜನಾಂಗ ವಿಧಾನಗಳೆನ್ನಬಹುದು. ಈ ಸೌಲಭ್ಯಗಳನ್ನು ದೊರಕುವಂತೆ ಮಾಡಲು ಸರಕಾರ ಹಣ ಖರ್ಚು ಮಾಡಬೇಕಾಗುತ್ತದೆ. ಬಡವರಿಗೆ ಹಾಗೂ ರೈತರಿಗೆ ಸಹಾಯಧನವನ್ನು ಕೊಡಬೇಕಾಗುತ್ತದೆ. ಇಂದಿನ ರೈತರಿಗೆ ಜಾಗತೀಕರಣ ನೀತಿ ಈ ಎಲ್ಲ ಕಾರ್ಯಗಳಿಗೆ ವೆಚ್ಚ ಕಡಿಮೆ ಮಾಡಲು ಆದೇಶ ನೀಡುತ್ತವೆ. ಇದರ ಪರಿಣಾಮವಾಗಿ ಸಾಂಕ್ರಾಮಿಕ ರೋಗಗಳು, ಪೋಷಕಾಂಶಗಳ ಕೊರತೆಯಿಂದ ಉಂಟಾಗುವ ರೋಗಗಳು ಹೆಚ್ಚಾಗುತ್ತವೆ.

★ ಇಲ್ಲಿಯವರೆಗೆ ಆರೋಗ್ಯ ನೀತಿಯನ್ನು ಆರೋಗ್ಯ ಸಚಿವಾಲಯ ರೂಪಿಸುತ್ತಿತ್ತು. ಆದರೆ ಇಂದು ಆರೋಗ್ಯ ನೀತಿ ರೂಪಿಸಲು ವಿಶ್ವಬ್ಯಾಂಕ್ ನಿರ್ಧರಿಸುತ್ತದೆ ಹಾಗೂ ಹಣ ವಿನಿಯೋಗ ಮಾಡಬೇಕಾದ ವಿಧಾನ ಹೇಳಲು ವಿಶ್ವಬ್ಯಾಂಕ್ ಪ್ರತಿನಿಧಿ ವಿತ್ತಸಚಿವಾಲಯದಲ್ಲಿರುತ್ತಾನೆ. ಆರೋಗ್ಯ ನೀತಿ ಆರೋಗ್ಯ ಸಚಿವಾಲಯದ ಕೈಮೀರಿದ್ದು, ಆದ್ದರಿಂದ ಜಾಗತೀಕರಣ ನೀತಿ ನಮ್ಮ ದೇಶದಲ್ಲಿ ತಳವೂರಿದಂತಾಗಿದೆ.

★ ಜಾಗತೀಕರಣದೊಂದಿಗೆ ಖಾಸಗೀಕರಣ ನೀತಿಯನ್ನು ಅನುಷ್ಠಾನಗೊಳಿಸುವ ಪ್ರಯತ್ನ ನಡೆಯುತ್ತಿದೆ. ಈಗಾಗಲೇ ಆರೋಗ್ಯಕ್ಷೇತ್ರ ಖಾಸಗೀಕ್ಷೇತ್ರದ ಹಿಡಿತದಲ್ಲಿದೆ. ಇನ್ನೂ ಹೆಚ್ಚು ಖಾಸಗೀಕರಿಸಲು ಭಾರತವನ್ನು ಪ್ರೋತ್ಸಾಹಿಸಲಾಗುತ್ತಿದೆ! ಇದೇ ಹಂತದಲ್ಲಿ ಸರಕಾರೀ ಸೌಲಭ್ಯಗಳು ಕಡಿಮೆಯಾಗುತ್ತಿವೆ. ಈಗಾಗಲೇ ಬಡತನದ ಪರಿಣಾಮವಾಗಿ ಜನರ ಕೊಂಡುಕೊಳ್ಳುವ ಸಾಮರ್ಥ ಕಡಿಮೆಯಾಗಿದ್ದರಿಂದ ಖಾಸಗೀ ಚಿಕಿತ್ಸೆ ಮಾಡಲು ಸಾಧ್ಯವಾಗದ್ದರಿಂದ, ಚಿಕಿತ್ಸೆಯಿಂದ ವಂಚಿತರಾಗುತ್ತಾರೆ ಅನಾರೋಗ್ಯ ಹಾಗೂ ಸಾವಿನ ಪ್ರಮಾಣ ಹೆಚ್ಚುತ್ತದೆ.

ಆರೋಗ್ಯ ವಲಯದಲ್ಲಿ ಹಣಹೂಡಿಕೆ

ರೋಗ ತಡೆಗಟ್ಟಲು ಆರೋಗ್ಯವೃದ್ಧಿಯಾಗಲು ಜನಾರೋಗ್ಯ ವಿಧಾನಗಳು ಸಹಾಯಕವಾಗುತ್ತವೆ. ಆದರೆ ಇಂದು ಜನಾರೋಗ್ಯಕ್ಕೆ ಕಡಿಮೆ ಖರ್ಚು ಮಾಡುವ ನೀತಿ ಬಂದಿದ್ದರಿಂದ, ರೋಗ ತಡೆಗಟ್ಟುವಿಕೆ ಹಾಗೂ ಆರೋಗ್ಯವೃದ್ಧಿ ಕಾರ್ಯಕ್ರಮಕ್ಕೆ ಪೆಟ್ಟು ಬೀಳುತ್ತದೆ ಹಾೂ ಅನಾರೋಗ್ಯ ಹೆಚ್ಚುತ್ತದೆ.

ಆರೋಗ್ಯಸಾಧನೆಗೆ, ಔಷಧಿಗಳು ಲಭ್ಯ ಪೂರಕವಾಗಿದೆ. ಭಾರತದಲ್ಲಿ ಔಷಧಿ ಉದ್ಯಮ ಸ್ವಾವಲಂಬನೆ ಸಾಧಿಸಿದೆ. ಇದರ ಪರಿಣಾಮವಾಗಿ ಔಷಧಿಬೆಲೆಗಳು ಕಡಿಮೆಯಾಗಿವೆ.

10 ಮಾತ್ರೆ, ರೂಗಳಲ್ಲಿ

ದೇಶ	ರಾಯನಿಟಿಡಿನ್ ಪಿತ್ತ ಕಡಿಮೆ ಮಾಡುವ ಔಷಧ ಜಠರ ಹುಣ್ಣು ಚಿಕಿತ್ಸೆಗೆ	ಡೈಕ್ಲೊಫೆನಾಕ್ ನೋವುನಿವಾರಕ
ಭಾರತ	7.16	5.64
ಯುಕೆ (UK)	320.85	125.88
ಯು.ಎಸ್.ಎ (USA)	739.60	505.68

ಆದರೆ ಈಗಾಗಲೇ ನಾವು ಒಪ್ಪಿಕೊಂಡಿರುವ ಜಾಗತೀಕರಣ ನೀತಿಯಿಂದಾಗಿ ಹೊಸ ಸ್ವಾಮ್ಯ ಕಾಯಿದೆ ಜಾರಿಗೆ ಬರುತ್ತದೆ ಹಾಗೂ ಔಷಧಿ ಬೆಲೆಗಳು ಗಗನಕ್ಕೇರುವ ಸಾಧ್ಯತೆ ಇದೆ. ಅದಲ್ಲದೆ ಅನಗತ್ಯ, ಅಪಾಯಕಾರಿ ಔಷಧಿಗಳು, ಅಪಾಯಕಾರಿ ಆರೋಗ್ಯ ಹಾಗೂ ಸೌಂದರ್ಯವರ್ಧಕಗಳು ನಮ್ಮ ಮಾರುಕಟ್ಟೆಗೆ ಬರುವ ಸಾಧ್ಯತೆ ಇದೆ. ಈಗಾಗಲೇ ಈ ಬೆಳವಣಿಗೆಯಾಗಿರುವುದನ್ನು ದೂರದರ್ಶನದಲ್ಲಿ ನೀವು ನೋಡಿರಬಹುದು. ಈ ಪದಾರ್ಥಗಳನ್ನು ರೋಗಿಗಳಿಗೆ ಆದೇಶಿಸಲು ವೈದ್ಯರನ್ನು - ಔಷಧಿಕಂಪನಿಗಳು ಪುಸಲಾಯಿಸುವುದರಿಂದ ರೋಗಿಗಳು ಅನಗತ್ಯ ಪದಾರ್ಥಗಳನ್ನು ಉಪಯೋಗಿಸಬೇಕಾಗುತ್ತದೆ. ಜಾಗತೀಕರಣವು ಔಷಧಿ ಉದ್ದಿಮೆಯ ಸ್ವಾವಲಂಬನೆಯನ್ನು ತಗ್ಗಿಸಿದೆ.

ಸಾರ್ವಜನಿಕ ಸಂಸ್ಥೆಗಳಲ್ಲಿ ಚಿಕಿತ್ಸೆ ಪಡೆಯಲು ಇಲ್ಲಿಯವರೆಗೆ ಹಣ ಕೊಡಬೇಕಾಗಿರಲಿಲ್ಲ. ಆದರೆ ಇಂದು ಚಿಕಿತ್ಸೆ ಪಡೆಯಲು ಸೇವಾಶುಲ್ಕ ಕೊಡಬೇಕಾಗುತ್ತದೆ. ಅದು ಬಡವರಿಗೆ ಚಿಕಿತ್ಸೆ ನಿರಾಕರಿಸಿದಂತಾಗುತ್ತದೆ.

'2000ದ ಹೊತ್ತಿಗೆ ಎಲ್ಲರಿಗೂ ಆರೋಗ್ಯ' ಎಂಬ ಕರೆಯನ್ನು ವಿಶ್ವ ಆರೋಗ್ಯ ಸಂಸ್ಥೆ ಎಲ್ಲ ರಾಷ್ಟ್ರಗಳಿಗೂ ನೀಡಿತ್ತು. ಈ ಕರೆಯನ್ನು ಯಾವ ರಾಷ್ಟ್ರಗಳಿಗೂ ಜಾರಿಗೊಳಿಸಲು ಸಾಧ್ಯವಾಗಲಿಲ್ಲ. ಜಾಗತೀಕರಣ ನೀತಿ ವೈಫಲ್ಯಕ್ಕೆ ಮುಖ್ಯ ಕಾರಣವೆಂದು ಹೇಳಬಹುದು.

70ರ ದಶಕದಲ್ಲಿ ಜಾಗತೀಕರಣ ನೀತಿ ಲ್ಯಾಟಿನ್ ಅಮೇರಿಕಾ, ಹಾಗೂ ಆಫ್ರಿಕಾಗಳಲ್ಲಿ ಜಾರಿಗೆ ಬಂದಿದೆ. ಈ ನೀತಿಗಳಿಂದ ಆ ದೇಶಗಳ ಹಿತಾಸಕ್ತಿಗೆ ಮಾರಕವಾಗಿದೆಯೆಂಬ ಅಂಶ ಹೊರಬಂದಿದೆ. ಭಾರತದಲ್ಲೂ ಈ ನೀತಿಗಳ ಪರಿಣಾಮ ಈಗಾಗಲೇ ಕಂಡು ಬರುತ್ತಿದೆ. ಉದಾ: ಔಷಧಿ ಬೆಲೆ ಏರಿಕೆ, ಹಣದುಬ್ಬರ, ಆಹಾರ ಭದ್ರತೆಯ ಅಭಾವ ಆರೋಗ್ಯ ಕ್ಷೇತ್ರಕ್ಕೆ ಭದ್ರತೆಯ ಅಭಾವ ಆರೋಗ್ಯ ಕ್ಷೇತ್ರಕ್ಕೆ ಧನಸಹಾಯ ಹಿಂತೆಗೆದುಕೊಳ್ಳುವಿಕೆ ಇತ್ಯಾದಿ.

ಈಗೇನು ಮಾಡಬಹುದು?

ಆರೋಗ್ಯ ವಲಯದಲ್ಲಿ ಹಣಹೂಡಿಕೆ

(ವಿಶ್ವ ಆರೋಗ್ಯವರದಿ 1993)

ದೇಶ	ಶೇಖಡಾವಾರು ಸರ್ಕಾರದ ಪಾಲು	ಶೇಕಡಾವಾರು ಖಾಸಗೀವಲಯದ ಪಾಲು
ಅಭಿವೃದ್ಧಿ ಗೊಂಡ ದೇಶಗಳು		
ಕೆನಾಡಾ	74.8	25.3
ಸ್ವೀಡನ್	87.2	10.7
ಯುಕೆ	85.2	14.8
ಅಭಿವೃದ್ಧಿಶೀಲದೇಶಗಳು		
ಭಾರತ	21.7	78.3
ಫಿಲಿಪೀನ್ಸ್	50	50
ಬಾಂಗ್ಲಾದೇಶ	43.8	56.2
ಇಂಡೋನೇಶಿಯಾ	35	65

ಜಾಗತೀಕರಣ ನೀತಿಯನ್ನು ಅರಿಯದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಇದರ ಬಗ್ಗೆ ಅರಿವು ಮೂಡಿಸುವುದು ಅತ್ಯವಶ್ಯಕ. ನಂತರ ಜಾಗತೀಕರಣವನ್ನು ಸಕ್ರಿಯವಾಗಿ ವಿರೋಧಿಸಬೇಕು.

ಜನಸಮುದಾಯಗಳನ್ನು ಸ್ಥಳೀಯವಾಗಿ ಸಂಘಟಿಸಬೇಕು, ಜನರೇ ಜನಾರೋಗ್ಯದ ಕೆಲವು ಜವಾಬ್ದಾರಿಗಳನ್ನು ತೆಗೆದುಕೊಳ್ಳುವಂತೆ ಪ್ರಯತ್ನಮಾಡಬೇಕು. ಕಾರ್ಯಪ್ರವೃತ್ತ ತಳರಚನೆಯನ್ನು ಕೈಗೊಂಡು ನೀತಿ ಹಾಗೂ ಧೋರಣೆಗಳನ್ನು ಜಾರಿಗೊಳಿಸುವ ಮೂಲಕ ಆರೋಗ್ಯ ಸುಧಾರಣೆಗೆ ಪ್ರಯತ್ನಿಸಬೇಕು.

ಜನಸಂಘಟನೆಗಳು ಜನಾಂದೋಲನ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಪ್ರಯತ್ನಿಸಬೇಕು. ಕೂಡಲೆ ಸರಕಾರ ಆರೋಗ್ಯ ನೀತಿ ಔಷಧಿ ನೀತಿ, ಜನಸಂಖ್ಯಾ ನೀತಿಯನ್ನು ರೂಪಿಸಿ ಅನುಷ್ಠಾನಗೊಳಿಸಲು ಪ್ರಯತ್ನಿಸಬೇಕು. ಜನರ ರೂಢಿಗತ ಜ್ಞಾನ ಹಾಗೂ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸಬೇಕು. ಮಹಿಳೆ ಮಕ್ಕಳು ಹಾಗೂ ಬಡಜನರ ಆರೋಗ್ಯ ಸುಧಾರಣೆಯನ್ನು ಈ ನೀತಿಗಳು ಕೂಡಲೆ ಪ್ರಯತ್ನಿಸಬೇಕು.

- ಡಾ. ಪ್ರಕಾಶ ಸಿ. ರಾವ್

ಕೇರಳದಲ್ಲಿ ಮೀನುಗಾರಿಕೆ - ಲಿಂಗಸಂಬಂಧಿ ಅಧ್ಯಯನಗಳು

1950ರಲ್ಲಿ ಭಾರತ ಸರ್ಕಾರವು ಮೀನುಗಾರಿಕೆಯ ಉದ್ಯಮವನ್ನು ಹೆಚ್ಚು ಆಧುನೀಕರಿಸುವ ಪ್ರಯತ್ನಗಳನ್ನು ನಡೆಸಿತು. ಅಲ್ಲಿಯವರೆಗೂ ಮೀನುಗಾರಿಕೆಯು ಋತುಸಂಬಂಧವಾದ ವೃತ್ತಿಯಾಗಿಯೇ ಉಳಿದಿತ್ತು. ಅಷ್ಟೇ ಅಲ್ಲದೆ, ದೇಶೀಯವಾದ ವ್ಯಕ್ತಿ ನೈಪುಣ್ಯತೆಯನ್ನು ಆ ನಿರ್ದಿಷ್ಟ ನೆಲಕ್ಕೆ ಸಂಬಂಧಿಸಿದ ಸಾಂಸ್ಕೃತಿಕ ವೈಶಿಷ್ಟ್ಯತೆಯನ್ನು ಒಳಗೊಂಡಿತ್ತು. ಮೂರ್‍ನಾಲ್ಕು ಮರದ ತೊಲೆಗಳಿಂದ ಕಟ್ಟಿ ಮಾಡಲ್ಪಟ್ಟ ತೆಪ್ಪದಂತಹ 'ಕಟ್ಟುಮರಂ', ನಾಡದೋಣಿ ಮಾದರಿಯ ಚಿಕ್ಕ 'ತೋಣಿ', ದೊಡ್ಡ ಗಾತ್ರದ ದೋಣಿ 'ಕಂಬವಲ' - ಈ ಮೂರು ತೆರನಾದ ದೋಣಿಗಳು ಬಳಕೆಯಲ್ಲಿದ್ದವು.

ಕೇರಳದ ಬೆಸ್ತ ಸಮುದಾಯದ ಮೇಲೆ ಆರ್ಥಿಕ ಸುಧಾರಣೆಯ ಪರಿಣಾಮವನ್ನು ಕುರಿತಂತೆ ಚರ್ಚಿಸುವ ಈ ಲೇಖನ, ಇಂತಹ ಸುಧಾರಣೆಗಳ ಬಿರುಗಾಳಿಯಲ್ಲಿ ಮಹಿಳೆಯರ ಸ್ಥಿತಿಗತಿಗಳನ್ನು ಚರ್ಚಿಸಿದೆ. ಹೋಲಿ ಎಂ. ಹಾಪ್ಕೆಯವರು. Economic and Political Weeklyಯಲ್ಲಿ ಬರೆದ ಒಂದು ಲೇಖನವನ್ನು ಆಧರಿಸಿ ಶ್ರೀಮತಿ ಹೆಚ್. ಎನ್. ಗೀತಾರವರು ಅಚಲಾಗೆ ಈ ಲೇಖನವನ್ನು ಸಿದ್ಧಗೊಳಿಸಿದ್ದಾರೆ.

ಕೇರಳದಲ್ಲಿ ಮೀನುಗಾರಿಕಾ ಉದ್ಯಮವನ್ನು ಆಧುನೀಕರಿಸುವ ನಿಟ್ಟಿನಲ್ಲಿ ಹಲವು ಕ್ರಮಗಳನ್ನು ಕೈಗೊಳ್ಳಲಾಯಿತು. ಇದರ ಮೊದಲ ಹಂತವೇ ಇಂಡೋ ನಾರ್ವೇ ಯೋಜನೆ ಎಂದು ಕರೆಯಲ್ಪಟ್ಟ ದ್ವಿಪಕ್ಷೀಯ ತಾಂತ್ರಿಕ ಸಹಾಯ ಯೋಜನೆ. ಈ ಜಂಟಿ ಯೋಜನೆಯನ್ನು ಮುಖ್ಯವಾಗಿ ಬೆಸ್ತರ ಸಮುದಾಯಗಳ ಸುಧಾರಣಾ ಪ್ರಯತ್ನವನ್ನಾಗಿ ರೂಪಿಸಲಾಗಿತ್ತು. ಇದರಲ್ಲಿ ಬೆಸ್ತರ ಆರೋಗ್ಯ ಹಾಗೂ ಕ್ಷೇಮಾಭಿವೃದ್ಧಿಯಲ್ಲಿದೆ. ಯಾಂತ್ರೀಕೃತ ದೋಣಿಗಳು ಮತ್ತು ಕೊಯಿಲಾನ್ ಜಿಲ್ಲೆಯ ಆಯ್ದ ಹಳ್ಳಿಗಳ ಗುಂಪುಗಳ ಹತ್ತಿರ ಒಂದು ಬಂದರನ್ನು ನಿರ್ಮಿಸುವ ವಿಚಾರವೂ ಇತ್ತು. ಆದರೆ 1960ರ ಆರಂಭದಲ್ಲಿ ಪ್ರಾನ್‌ಗಳಿಗಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅಪಾರ ಬೇಡಿಕೆ ಬಂದಿತು. ಕೇರಳದಲ್ಲೋ, ಪ್ರಾನ್ ಸಮೃದ್ಧವಾಗಿವೆ. ಆದ್ದರಿಂದ ಅವುಗಳನ್ನು ವಿಶ್ವಮಾರುಕಟ್ಟೆಗೆ ರಫ್ತು ಮಾಡುವ ಹುಮ್ಮಸ್ಸಿನಲ್ಲಿ ಸರ್ಕಾರ ಟ್ರಾಲ್ ದೋಣಿಗಳ ಬಳಕೆಗೆ ಪ್ರೋತ್ಸಾಹ ನೀಡುವತ್ತ ಹೆಚ್ಚು ಗಮನ ಹರಿಸಿತು. ಈ ದೋಣಿಗಳಲ್ಲಿ ಹೆಚ್ಚು ಮೀನು ಬಲೆಗೆ ಬೀಳುತ್ತವೆಯೇನೋ ಹೌದು, ಆದರೆ ಅದು ದುಬಾರಿಯೂ ಕೂಡ.

ತಂತ್ರಜ್ಞಾನ ಸುಧಾರಣೆಯ ಮೊದಲ ಹಂತಕ್ಕೆ ಕೆಲವೇ ಹಳ್ಳಿಗಳನ್ನು ಆಯ್ದುಕೊಳ್ಳಲಾಗಿತ್ತಾದರೂ, ಈ ಪ್ರದೇಶದಾದ್ಯಂತ ಇದರ ಪರಿಣಾಮ ಪ್ರತಿಧ್ವನಿಸಿತು. ನೆರೆಯ ತಿರುವನಂತಪುರವಲ್ಲದೆ, ರಾಜ್ಯದ ಇತರ ಪ್ರದೇಶಗಳ ಮತ್ಸ್ಯೋದ್ಯಮದ ಆರ್ಥಿಕ ಪರಿಸ್ಥಿತಿ ಮೇಲೂ ಪರೋಕ್ಷ ಪರಿಣಾಮ ಬೀರಿತು. ಸುಧಾರಣೆಯ ಮೂಲ ಉದ್ದೇಶದ ಪ್ರಕಾರ ಯಾಂತ್ರೀಕೃತ ದೋಣಿಗಳ ಬೆಸ್ತರು ದೂರಸಮುದ್ರಕ್ಕೆ ಹೋಗಿ ರಫ್ತು ಮಾರಾಟಕ್ಕಾಗಿಯೇ ಪ್ರಾನ್‌ಗಳನ್ನು ತರಬೇಕು ಹಾಗೂ ನಾಡದೋಣಿಗಳ ಬೆಸ್ತರು ತೀರದ ಸಮೀಪದಲ್ಲಿಯೇ ದೇಶೀಯಬಳಕೆಗಾಗಿ ಬಲೆ ಬೀಸಬೇಕು. ಆದರೆ ಕ್ರಮೇಣವಾಗಿ, ಯಾಂತ್ರೀಕೃತ ದೋಣಿಗಳ ತಂಡದವರು ನಾಡದೋಣಿಗಳ ತಂಡದ ಕಾರ್ಯಕ್ಷೇತ್ರಕ್ಕೂ ತಮ್ಮ ಬಲೆ ವಿಸ್ತರಿಸತೊಡಗಿದರು. ಸಹಜವಾಗಿಯೇ ನಾಡದೋಣಿಗಳ ತಂಡಕ್ಕೆ ಇಳುವರಿ ಕಡಿಮೆಯಾಗತೊಡಗಿತು; ತಂಡಗಳಲ್ಲಿ ಪೈಪೋಟಿ ಹೆಚ್ಚತೊಡಗಿತು; ವಾದ ವಿವಾದಗಳು ಹುಟ್ಟಿಕೊಂಡವು. ಈ ಪೈಪೋಟಿಯನ್ನು ಪರಿಣಾಮಕಾರಿಯಾಗಿ ಎದುರಿಸಲು ನಾಡದೋಣಿ ತಂಡದವರು ಪರ್ಯಾಯ ತಂತ್ರಜ್ಞಾನವನ್ನು ಅರಸಿದರು. ಆಗ ಮೋಟರ್ ದೋಣಿಗಳನ್ನು ರಾಜ್ಯದ ಬೆಸ್ತ ಸಮುದಾಯ ಪರಿಚಯಿಸಲಾಯಿತು. ನಾಡದೋಣಿಗಳ ತಂಡದವರು ಹೀಗೆ ತಮ್ಮ ಉತ್ಪಾದನಾ ಪ್ರಯತ್ನ ಹೆಚ್ಚಿಸತೊಡಗಿದರು.

ಇದು 1980ರಲ್ಲಿ ತಿರುವನಂತಪುರದ ಜಿಲ್ಲೆಯಲ್ಲಿ ನಡೆದ ತಂತ್ರಜ್ಞಾನ ಸುಧಾರಣೆಯ ಒಂದು ನೋಟ. ಇದರ ಅನುಭವ ಮಿಶ್ರರಾಶಿಯದು. ವಾಸ್ತವದಲ್ಲಿ ಈ ಬದಲಾವಣೆ ಸಂಪೂರ್ಣವಾಗಿ ಆದಂತಿಲ್ಲ. ಬಹುತೇಕ ಬೆಸ್ತರು ಮೋಟರ್‌ದೋಣಿಯನ್ನು ಒಪ್ಪಿಕೊಂಡೇ ಇಲ್ಲ. ಈ ಜಿಲ್ಲೆಯಲ್ಲಿ ಹೆಚ್ಚಿನವರು ಹಳೆಯ ಸಾಂಪ್ರದಾಯಿಕ ನಾಡದೋಣಿಯನ್ನೇ ಬಳಸುತ್ತಾರೆ. ಇಲ್ಲಿ ಉದ್ಭವಿಸಿರುವ ಮತ್ತೊಂದು ಸಮಸ್ಯೆಯೆಂದರೆ ಯಾಂತ್ರೀಕೃತ ಹಾಗೂ ಮೋಟರ್

ದೋಣಿಗಳಲ್ಲಿ ವ್ಯಾಪಕವಾಗಿ ಜಾಲಾಡಬಹುದಾದ್ದರಿಂದ ಮೀನುಗಳು ಹೇರಳವಾಗಿ ಬಲೆಗೆ ಬೀಳುತ್ತವೆ. ಆದರೆ ಇದರಿಂದ ಮೀನುಗಳ ಕೊರತೆಯೂ ಉಂಟಾಗುತ್ತದೆ. ಇದರ ತತ್‌ಕ್ಷಣದ ಪರಿಣಾಮಕ್ಕೆ ತೀವ್ರವಾಗಿ ಒಳಗಾಗುವವರು ನಾಡದೋಣಿ ತಂಡದವರೇ. 1980ರಿಂದ ತಿರುವನಂತಪುರ ಜಿಲ್ಲೆಯ ಬೆಸ್ತಕುಟುಂಬಗಳು ಈ ಪ್ರಾಕೃತಿಕ ಅಸಮತೋಲನದ ಬಲೆಯಲ್ಲಿ ಸಿಲುಕಿಕೊಂಡಿದ್ದಾರೆ.

ಪ್ರಾಕೃತಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಕುಟುಂಬಗಳ ಉಳಿವಿಗಾಗಿ ತಂತ್ರಗಳು

ಮೀನುಗಾರಿಕಾ ಉದ್ಯಮದಲ್ಲಿ ತಂತ್ರಜ್ಞಾನ ಸುಧಾರಣೆಯೆಂದಾಗ ಈ ಸುಧಾರಣೆ ಬೆಸ್ತ ಕುಟುಂಬಗಳಿಗೆ ಏನನ್ನು ಕೊಟ್ಟಿದೆ ಹಾಗೂ ಈ ಕುಟುಂಬಗಳು ತಮಗೊದಗಿರುವ ಪ್ರಾಕೃತಿಕ ಬಿಕ್ಕಟ್ಟನ್ನು ನಿವಾರಿಸಿಕೊಳ್ಳಲು ಹೇಗೆ ಪ್ರಯತ್ನಿಸುತ್ತವೆ ಮುಂತಾದ ಪ್ರಶ್ನೆಗಳು ಏಳುತ್ತವೆ. ಇಲ್ಲಿನ ಬೆಸ್ತ ಸಮುದಾಯದಲ್ಲಿ ಮುಖ್ಯವಾಗಿ ಎರಡು ಪಂಗಡಗಳಿವೆ. ಒಂದು, ಕೋಚೆತೋಪ್ ಎಂಬ ಕ್ರೈಸ್ತ ಪಂಗಡ, ಮತ್ತೊಂದು ಬೀಮಪ್ಪಳ್ಳಿ ಎಂಬ ಮುಸಲ್ಮಾನ ಪಂಗಡ. ಇವೆರಡೂ ಪಂಗಡಗಳ ಅಧ್ಯಯನ ಇವರು ಕೈಗೊಂಡಿರುವ ನಿವಾರಣ ಕ್ರಮಗಳನ್ನು ತಿಳಿಸುತ್ತವೆ. ಈ ಕ್ರಮಗಳು ಸ್ಥಳೀಯ ಭೌಗೋಳಿಕ ಹಿನ್ನೆಲೆಯನ್ನು ಅವಲಂಬಿಸಿದೆ. ಅಷ್ಟೇ ಅಲ್ಲ, ಲಿಂಗಾಧಾರಿತವೂ ಆಗಿದೆ. ಈ ಅಧ್ಯಯನವು ಎರಡು ಪಂಗಡಗಳ ಮಹಿಳೆಯರು ನಿರ್ವಹಿಸುವ ವಿಭಿನ್ನ ಚಟುವಟಿಕೆಗಳು, ಕುಟುಂಬಗಳ ಉಳಿವಿನಲ್ಲಿ ಅವರ ಮಹತ್ವದ ಪಾತ್ರ, ಅವರು ಎದುರಿಸುವ ಅಡ್ಡಿ ಆತಂಕಗಳ ಬಗ್ಗೆ ಬೆಳಕು ಚೆಲ್ಲುತ್ತದೆ.

ತಿರುವನಂತಪುರದ ಜಿಲ್ಲೆಯಲ್ಲಿರುವ ಬೆಸ್ತ ಸಮುದಾಯದಲ್ಲಿ ಹೆಚ್ಚಿನವರು ಕ್ರೈಸ್ತರೇ ಆಗಿದ್ದಾರೆ. ಇವರ ವೃತ್ತಿ ತಲೆತಲಾಂತರದಿಂದ ಮೀನು ಹಿಡಿಯುವುದೇ ಆಗಿದೆ. ಆದರೆ ಮುಸಲ್ಮಾನ ಪಂಗಡದವರು ಇತ್ತೀಚೆಗೆ, ಅಂದರೆ ಸುಮಾರು 150 ವರ್ಷಗಳಿಂದೀಚೆಗೆ ಈ ಕಸಬಿಗೆ ಇಳಿದಿದ್ದಾರೆ. ಕನ್ಯಾಕುಮಾರಿಯಿಂದ ವಲಸೆ ಬಂದಿರುವ ಇವರು ಮೂಲತಃ ಉಪ್ಪಿನ ಉದ್ಯಮದಲ್ಲಿದ್ದವರು. ಆದ್ದರಿಂದಲೇ ಮೀನು ಹಿಡಿಯುವುದರಲ್ಲಿ ಕ್ರೈಸ್ತ ಪಂಗಡಕ್ಕಿರುವ ಅನುಭವ ಹಾಗೂ ಪರಿಣತಿ ಇವರಿಗಿಲ್ಲ. ಬೀಮಪ್ಪಳ್ಳಿ ಪಂಗಡದ ಗಮನ ಸೆಳೆಯುವ ಧೋರಣೆಯೆಂದರೆ ಪುರುಷರು ಮಾತ್ರ ದುಡಿದು, ಮನೆಯ ಆರ್ಥಿಕ ಜವಾಬ್ದಾರಿ ಹೊರಬೇಕು ಹಾಗೂ ಮಹಿಳೆಯ ಸ್ಥಾನ ಮನೆಗೇ ಸೀಮಿತವಾಗಿರಬೇಕು. ಈ ಮಹಿಳೆಯರು ಮನೆಗೆಲಸ ಮಾಡಿಕೊಳ್ಳುತ್ತಾರೆಯೇ ಹೊರತು ಹೊರಗೆ ಹೋಗಿ ದುಡಿಯುವ ಮಾತಿರಲಿ, ಮನೆಯೊಳಗೆ ಕುಳಿತೇ ಆದಾಯ ತರುವಂಥ ಯಾವುದೇ ಕೆಲಸ ಮಾಡುವಂತಿಲ್ಲ. ಪುರುಷರು ದುಡಿದು ತರುವ ಸಾಮರ್ಥ್ಯದ ಮೇಲೆಯೇ ಸಮಾಜದಲ್ಲಿ ಅವರ ಸ್ಥಾನಮಾನ ಹೆಚ್ಚುವುದು, ಪುರುಷತ್ವ ಜಾಗೃತಗೊಳ್ಳುವುದು. ಆದರೂ ಅಪರೂಪಕ್ಕೆಂಬಂತೆ ಒಬ್ಬಿಬ್ಬರು ಮಹಿಳೆಯರು ಬಡ್ಡಿ ವ್ಯವಹಾರ, ಹಾಲಿನ ವ್ಯಾಪಾರ, ತರಕಾರಿ ಮಾರಾಟ, ಮೀನನ್ನು ಒಣಗಿಸಿ ಮಾರಾಟ ಹಾಗೂ ಊಟ-ತಿಂಡಿ-ತಿನಿಸಿಗಳ ತಯಾರಿಕೆ ಮುಂತಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಆದರೆ ಇವರೆಲ್ಲ ತಮ್ಮ ಕುಟುಂಬದ ಮುಖ್ಯಸ್ಥರೇ ಆಗಿರುತ್ತಾರೆನ್ನುವುದು ಗಮನಕ್ಕೆ ಬಾರದೇ ಹೋಗುವುದಿಲ್ಲ.

ಅದೇನೇ ಇರಲಿ, ಕುಟುಂಬಗಳ ಉಳಿವಿಗೆ ಬಳಸುವ ತಂತ್ರಗಳಲ್ಲಿ ಲಿಂಗಾಧಾರಿತ ಕಾರ್ಯ ವಿಭಜನೆಯೂ ಪ್ರಭಾವಶಾಲೀ ತಂತ್ರವೇ ಆಗಿದೆ. ಅಂದರೆ, ಮಹಿಳೆಯರು ಮನೆಯ ಚೌಕಟ್ಟಿಗೇ ಸೀಮಿತವಾಗಿ, ಪುರುಷರೇ ದುಡಿದು ತರುವ ಸಂಪ್ರದಾಯ ಕುಟುಂಬಗಳ ಉಳಿವಿಗೆ ಬಳಸುವ ತಂತ್ರಗಳ ಮೇಲೂ ಪ್ರಭಾವ ಬೀರಿದೆ. ಈ ತಂತ್ರಗಳ ಪೈಕಿ ಎರಡು ವಿಧಗಳಿವೆ. ಒಂದು, ಪುರುಷರು ಮೀನು ಹಿಡಿಯುವ ಕೆಲಸ ಮಾತ್ರವಲ್ಲದೆ ಬೇರೆ ವೃತ್ತಿಗೂ ಇಳಿಯುವುದು. ಅದು ನಲ್ಲಿ ಕೆಲಸ, ವಿದ್ಯುತ್ ಕೆಲಸ, ಬಣ್ಣ ಬಳಿಯುವುದು ಮುಂತಾದ್ದೇ ಆಗಿರಬಹುದು; ಅಥವಾ ಬಟ್ಟೆ ಅಂಗಡಿಯನ್ನೋ, ಎಲೆಕ್ಟ್ರಾನಿಕ್ ಸಾಮಾನುಗಳ ಅಂಗಡಿಯನ್ನು ತೆರೆಯುವುದೋ ಆಗಿರಬಹುದು. ಎರಡನೆಯ ವಿಧವೆಂದರೆ - ವಲಸೆ ಹೋಗುವುದು. 1960ರವರೆಗೆ ಬೀಮಪ್ಪಳ್ಳಿಯ ಪುರುಷರು ಕೊಲುಬೋವಿನ ಬಂದರಿನಲ್ಲಿ ಕೆಲಸ ಮಾಡಲು ಹೋಗುತ್ತಿದ್ದರು. ಆದರೆ ಈಗ ಅರಬ್ ರಾಷ್ಟ್ರಗಳಿಗೆ ವಲಸೆ ಹೋಗುತ್ತಿದ್ದಾರೆ. ಆದರೆ ಈಗ ಪ್ರತಿಯೊಂದು ಕುಟುಂಬದಲ್ಲಿಯೂ ಒಬ್ಬರಾದರೂ ಅರಬ್ ರಾಷ್ಟ್ರದಲ್ಲಿರುತ್ತಾರೆ. ಆದರೆ ಇತ್ತ ಅಲ್ಪ ಸ್ವಲ್ಪವಾದರೂ ಮೀನಿನ ಸರಕಿನಲ್ಲಿ ಕೈಯಾಡಿಸುತ್ತಿದ್ದ ಮಹಿಳೆಯರು ಈಗ ಸಂಪೂರ್ಣವಾಗಿ ಹಿಂದೆ ಸರಿದಿದ್ದಾರೆ. ಈಗಿನ ಮಹಿಳೆಯರು ತಮ್ಮ ಅಂಗಳಗಳಲ್ಲಿ ತಮ್ಮದೇ ಮನೆಯ ಮೀನು ಒಣಗ

ಹಾಕುತ್ತಾರೆಯೇ ಹೊರತು ಬೇರೆಯವರಿಗಾಗಿ ಮೀನು ಒಣಗಿಸುವುದಿಲ್ಲ; ಒಂದೆರೆಡು ಕಾಸು ಮಾಡಿಕೊಳ್ಳುವುದಿಲ್ಲ. ಕಡುಬಡವ ವೃದ್ಧೆಯರಷ್ಟೇ ಈ ಕೆಲಸ ಮಾಡುತ್ತಾರೆ. ಅಂದರೆ, ಮೀನು ಒಣಗಿಸುವುದು ಕೂಡ ಈಗ ಪುರುಷರ ಕೆಲಸವೇ ಆಗಿದೆ. ಒಟ್ಟಿನಲ್ಲಿ, ಬೀಮಪ್ಪಳ್ಳಿಯ ಕುಟುಂಬಗಳು ಆರ್ಥಿಕವಾಗಿ ಅಭಿವೃದ್ಧಿಯನ್ನೇನೋ ಹೊಂದಿವೆ. ಆದರೆ ಅಲ್ಲಿನ ಮಹಿಳೆಯರನ್ನು ಕೆಲಸದಿಂದ ವಿಮುಖರನ್ನಾಗಿಸಿದೆ. ಎಂದೋ ಒಂದು ಕಾಲದಲ್ಲಿ ಬೀಮಪ್ಪಳ್ಳಿಯ ಕೆಲ ಮಹಿಳೆಯರು ಮೀನಿನ ಮಾರಾಟ ನಡೆಸುತ್ತಿದ್ದಿರಬಹುದು. ಆದರೂ ಆ ಕಸುಬು ಮಹಿಳೆಯರಿಗೆ 'ತಕ್ಕದ್ದು' ಎನಿಸಿಕೊಳ್ಳಲಿಲ್ಲ.

ಕೋಚತೋಪ್ ಪಂಗಡದ ರೀತಿರಿವಾಜುಗಳು ಇದಕ್ಕೆ ತದ್ವಿರುದ್ಧ. ಈ ಕ್ರೈಸ್ತ ಪಂಗಡದಲ್ಲಿ ಲಿಂಗಭೇದ ಹೇಗಿದೆಯೆಂದರೆ, ಪುರುಷರ ಕೆಲಸ ಕೇವಲ ಮೀನು ಹಿಡಿದು ತರುವುದಕ್ಕಷ್ಟೇ ಸೀಮಿತ. ಅದನ್ನು ಒಣಗಿಸಿ, ಮಾರಾಟ ಮಾಡಿ ಬರುವುದು ಮಹಿಳೆಯರ ಜವಾಬ್ದಾರಿ. ಮನೆ ಬಳಕೆಗೆ ಸಾಮಾನು ಸರಂಜಾಮು, ಮನೆಮಂದಿಗೆ ಔಷಧೋಪಚಾರ - ಆರೈಕೆ, ಇವೆಲ್ಲಾ ಮಹಿಳೆಯರ ಗೃಹಕೃತ್ಯಗಳ ಪಾಲಿಗೆ ಬರುತ್ತವೆ. ಇಷ್ಟೇ ಅಲ್ಲದೆ, ಮನೆಯ ಖರ್ಚು ವೆಚ್ಚ - ಹಣಕಾಸಿನ ನಿರ್ವಹಣೆ, ಮದುವೆ ಸಂಬಂಧಗಳನ್ನು ಕುದುರಿಸುವುದು. ವರದಕ್ಷಿಣೆಗೆ ಹಣದ ಏರ್ಪಾಟು, ಸಾಲದ ಏರ್ಪಾಟು ಇವೆಲ್ಲದರ ಜವಾಬ್ದಾರಿ ಮಹಿಳೆಯರೇ ಹೊರುತ್ತಾರೆ.

ಈ ಪಂಗಡದಲ್ಲಿ ಮೀನು ಹಿಡಿಯುವ ಕೆಲಸ ಮಾತ್ರವೇ ಪುರುಷರ ಕೆಲಸ. ಸಮುದ್ರದೊಡನೆ ಅವರ ಒಡನಾಟ, ಸೆಣಸಾಟದಿಂದಲೇ ಅವರಿಗೆ 'ಅಹಂ'. ತಿರುವನಂತಪುರದ ಕರಾವಳಿ ಪ್ರದೇಶಗಳಲ್ಲಂತೂ, 'ಬೆಸ್ತರೆಂದರೆ ಕೋಚೆತೋಪ್‌ನ ಪುರುಷರು' ಎನ್ನುತ್ತಾರೆ. ಇಂತಹ ನಿಪುಣ ಮೀನುಗಾರರು ಕೂಡ ಕುಟುಂಬಗಳ ಉಳಿವಿಗಾಗಿ ಬೇರೆ ಕ್ಷೇತ್ರಗಳಲ್ಲಿ ಕೆಲಸ ಅರಸಬೇಕಾಗುತ್ತದೆ, ವಲಸೆ ಹೋಗಬೇಕಾಗುತ್ತದೆ. ಹೀಗಾಗಿ ಹೆಚ್ಚು ಹೆಚ್ಚು ಕೋಚೆತೋಪ್ ಕುಟುಂಬಗಳು ತಮ್ಮ ಉಳಿವಿಗಾಗಿ ಮಹಿಳೆಯರನ್ನೂ ಅವಲಂಬಿಸುತ್ತಿವೆ. ಇದು ಎಷ್ಟು ಹೆಚ್ಚಾಗಿದೆಯೆಂದರೆ, ಮಹಿಳೆಯರೂ ಅರಬ್‌ಗೆ ವಲಸೆ ಹೋಗುತ್ತಾರೆ; ಪುರುಷರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಹೋಗುತ್ತಾರೆ. ಇದಕ್ಕೂ ಕಾರಣವಿದೆ. ಈ ಪುರುಷರಿಗೆ ಯಾವುದೇ ರೀತಿಯ ವೃತ್ತಿ ಕೌಶಲ್ಯಗಳಿಲ್ಲ. ಮಹಿಳೆಯರಾದರೋ ಮನೆಗೆಲಸದವರಾಗಿಯೂ ದುಡಿಯುತ್ತಾರೆ.

ಬೆಸ್ತ ಪಂಗಡಗಳು ಯಾವುದೇ ಆಗಿರಲಿ, ಅವುಗಳ ಉಳಿವಿಗಾಗಿ ಮಾರಾಟ ಕ್ಷೇತ್ರದ ಚಟುವಟಿಕೆಗಳಲ್ಲಿ ಆ ಮಹಿಳೆಯರು ವಹಿಸುವ ಪಾತ್ರವೂ ಮಹತ್ವದ್ದು.

ಕ್ರೈಸ್ತ ಬೆಸ್ತ ಕುಟುಂಬಗಳಲ್ಲಿ, 1960ಕ್ಕೂ ಮೊದಲು, ಪುರುಷನಿಗೆ ಹಾಗೂ ಮಹಿಳೆಯರಿಗೆ ಅವರದೇ ಆದ ನಿರ್ದಿಷ್ಟ ಕೆಲಸಗಳಿದ್ದವು ಅಥವಾ, ಮೀನು ಹಿಡಿಯುವ ಕೆಲಸ ಒಂದನ್ನು ಬಿಟ್ಟು ಮಿಕ್ಕೆಲ್ಲವೂ ಮಹಿಳೆಯರದೇ ಕೆಲಸಗಳಾಗಿದ್ದವು ಎಂದು ಹೇಳಬಹುದು. ಆದರೆ ಉತ್ಪಾದನಾ ಪ್ರಕ್ರಿಯೆಗಳಲ್ಲಿ ಬಂಡವಾಳದ ಧೋರಣೆ ಮಿಳಿತಗೊಂಡಾಗ ಮೀನಿನ ಮಾರುಕಟ್ಟೆಯಲ್ಲಿಯೂ ಬದಲಾವಣೆ ಕಂಡು ಬಂದಿತು. ಸ್ಥಳೀಯ ಮಾರಾಟ ತೀರಗಳ ಮೇಲೂ ಸಗಟು ಮಾರುಕಟ್ಟೆ ತನ್ನ ಹಿಡಿತ ಸಾಧಿಸಿತು. ಹೆಚ್ಚಿದ ಉತ್ಪಾದನೆ, ವಿಸ್ತಾರಗೊಂಡ ಮೀನಿನ ವ್ಯಾಪಾರ. ಹೆಚ್ಚಾದ ಬೇಡಿಕೆ - ಇವೆಲ್ಲವೂ ರಾಜ್ಯದ ಮೀನು ಮಾರಾಟ ವ್ಯವಸ್ಥೆಯ ಮೇಲೂ ಪರಿಣಾಮ ಬೀರಿತು. ಎಲ್ಲಾ ತೀರಗಳಲ್ಲಿಯೂ ಮೀನಿನ ಹರಾಜು ಪದ್ಧತಿ ಜಾರಿಗೆ ಬಂದಿತು. ಎಲ್ಲ ಹಂತಗಳಲ್ಲಿಯೂ ವಾಣಿಜ್ಯೀಕರಣ (commercialisation) ಕಾಣಿಸಿಕೊಂಡಿತು. ಇದರ ಪರಿಣಾಮ ಮಹಿಳಾ ಮೀನು ಮಾರಾಟಗಾರರ ಮೇಲೆ ಸಮ್ಮಿಶ್ರ ರೀತಿಯಲ್ಲಿ ಆಯಿತು. ಈ ಹಿಂದೆ ಮೀನು ಲಭ್ಯವಿದ್ದ ಕಾಲದಲ್ಲಿ ಮಾತ್ರ ಮೀನಿನ ಮಾರಾಟ ನಡೆಯುತ್ತಿತ್ತು. ಅಂದರೆ, ಆರು ತಿಂಗಳು ಮೀನಿನ ಸುಗ್ಗಿ; ಮತ್ತಾರು ತಿಂಗಳು ಬರ. ಆದರೆ ಈಗ ವ್ಯಾಪಾರ ವಿಸ್ತಾರಗೊಂಡು ಸಗಟು ಮಾರುಕಟ್ಟೆಯೂ ರೂಪುಗೊಂಡಿರುವ ಸಂದರ್ಭದಲ್ಲಿ ಮೀನು ವರ್ಷವಿಡೀ ಲಭ್ಯ. ಇದರಿಂದ ಗಳಿಕೆಯಲ್ಲೂ ಏರಿಕೆಯಾಗಿ, ಜೀವನಮಟ್ಟ ಉತ್ತಮಗೊಂಡಿದೆ. ಬಹಳ ಮಂದಿ ಮಹಿಳೆಯರು ಈ ಕ್ಷೇತ್ರದಲ್ಲಿ ಸಫಲರಾಗಿ ಸಣ್ಣ ಪ್ರಮಾಣದಲ್ಲಿ ಸಗಟು ವರ್ತಕರೂ ಆಗಿದ್ದಾರೆ.

ಇಷ್ಟೆಲ್ಲ ಅಭಿವೃದ್ಧಿಗಳಾದರೂ ಕೂಡ ಕೋಚೀತೋಪ್‌ನ ಮಹಿಳೆಯರಿಗೆ ಆತಂಕ-ಒತ್ತಡಗಳು ತಪ್ಪಿದ್ದಲ್ಲ. ತಿರುವನಂತಪುರದ ಕರಾವಳಿಯ ಪ್ರದೇಶಗಳಲ್ಲಿ ಯಾಂತ್ರೀಕೃತ ಹಾಗೂ ಮೋಟರ್ ದೋಣಿಗಳು ಬಲೆ ಬೀಸತೊಡಗಿದ ಮೇಲೆ ನಾಡದೋಣಿಗಳ ತಂಡದ ಇಳುವರಿ ಸಹಜವಾಗಿಯೇ

ಕಡಿಮೆಯಾಗತೊಡಗಿದೆ. ಕುಟುಂಬಗಳ ಉಳಿವಿಗಾಗಿ ಮಹಿಳೆಯರು ಹೆಚ್ಚಿನ ಶ್ರಮ ವಹಿಸುವುದು ಅನಿವಾರ್ಯವೇ ಆಗಿದೆ. ಈ ಮೊದಲು ಮನೆಯಾತ ಅಥವಾ ತಂಡದವರು ತಂದ ಮೀನನ್ನು ಮಾರಿ ಬರುವುದಷ್ಟೇ ಅವರ ಕೆಲಸವಾಗಿತ್ತು. ಇದಕ್ಕೆ ಯಾವ ರೀತಿಯ ಬಂಡವಾಳವೂ ಬೇಕಾಗಿರಲಿಲ್ಲ. ಆದರೆ ಮೀನಿನ ಇಳುವರಿ ಕಡಿಮೆಯಾದ ಸಂದರ್ಭದಲ್ಲಿ ಮೀನನ್ನು ಹೊರಗಿನಿಂದ ಬೇರೆಯವರಿಂದ ಅಥವಾ ಸಗಟು ಮಾರುಕಟ್ಟೆಯಿಂದ ಖರೀದಿಸಿಯೇ ತೀರಬೇಕು. ತುಸು ಹಣ ಗಳಿಸಲು, ಹಣ ವ್ಯಯಿಸಲೇ ಬೇಕು. ಆದರೆ ಮೂಲಕ್ಕೇ ಸೊನ್ನೆಯಾದಾಗ....?

ಬಂಡವಾಳಶಾಹಿ ವ್ಯವಸ್ಥೆಯಲ್ಲಿ ವ್ಯಾಪಾರ ನಡೆಸುವುದು ಸಣ್ಣ ಪ್ರಮಾಣದ ವ್ಯಾಪಾರಿಗೆ ಸಲೀಸೇನಲ್ಲ. ಅಂತೆಯೇ ಬೆಸ್ತ ಕುಟುಂಬಗಳ ಬಹುತೇಕ ಮಹಿಳೆಯರಿಗೆ ಯಾವುದೇ ರೀತಿಯ ಬಂಡವಾಳವಿಲ್ಲದ ಕಾರಣ ಸಣ್ಣ ಪ್ರಮಾಣದ ವ್ಯಾಪಾರಿಗಳಾಗಿಯೇ ಉಳಿದುಬಿಡುತ್ತಾರೆ. ಈ ಹಂತದಿಂದ ಮೇಲೇರಲು ಅವರಿಗೆ ಸಾಧ್ಯವೇ ಆಗುವುದಿಲ್ಲ.

ಮೀನಿನ ವ್ಯಾಪಾರದಲ್ಲಿ, ಮಹಿಳೆಯರಾಗಿರುವುದರಿಂದ ಕೆಲವು ಬಾರಿ ಹಿನ್ನಡೆ ಉಂಟಾಗುತ್ತದೆ. ಮನೆಯ ಇತರ ಜವಾಬ್ದಾರಿಗಳು ಹಾಗೂ ಅಸಮರ್ಪಕ ಸಾರಿಗೆ ಸೌಲಭ್ಯ ಮುಂತಾದ ಅನಾನುಕೂಲತೆಗಳು ಮಹಿಳೆಯರ ಓಡಾಟಕ್ಕೆ ಅಡ್ಡಿಯಾಗುತ್ತವೆ. ಇದು ಸಾಲದೆಂಬಂತೆ, ಮಹಿಳೆಯರು ಸಾರ್ವಜನಿಕ ಸ್ಥಳಗಳಲ್ಲಿ ಓಡಾಡಬಾರದು. ಪುರುಷರೊಡನೆ ಮಾತಾಡಬಾರದು ಮುಂತಾದ ನಿಷೇಧಗಳು ಕೂಡ ಇವೆ. ಇವೆಲ್ಲ ಮಹಿಳೆಯರ ಉನ್ನತಿಗೆ ಅಡ್ಡಗಾಲು ಹಾಕುತ್ತವೆ. ಅನುಕೂಲವಂತ ಸಭ್ಯದಾಸ್ತಾನುಗಾರರನ್ನು ಸಂಪರ್ಕಿಸಿ ಸೌಹಾರ್ದಯುತ ವ್ಯಾಪಾರ ಸಂಬಂಧ ಏರ್ಪಡಲು ತಡೆಯಾಗುತ್ತವೆ. ಒಡ್ಡು, ಒರಟು ವಾತಾವರಣದಲ್ಲೇ ಈ ಮಹಿಳೆಯರು ಏಗಬೇಕಾಗುತ್ತದೆ.

ಕೊನೆಯದಾಗಿ, ರಾಜ್ಯಾಂಗ ಹಾಗೂ ಅದರ ಅಭಿವೃದ್ಧಿ ಕಾರ್ಯಗಳು ಕೂಡ ಮಹಿಳೆಯರನ್ನು ಅಲಕ್ಷಿಸಿವೆ. ಮೀನು ಮಾರುಕಟ್ಟೆಯಲ್ಲಿ ಸರ್ಕಾರದ ಮಧ್ಯಸ್ಥಿಕೆ ದುರ್ಬಲವಾಗಿದೆ. ಮೀನಿನ ಮಾರಾಟ ಜವಾಬ್ದಾರಿ ಮಾತ್ರ ಮಹಿಳೆಯರದು. ಆದರೆ ಸಹಕಾರಿ ವಲಯಗಳು ಇವರನ್ನು ಲೆಕ್ಕಕ್ಕೇ ತೆಗೆದುಕೊಂಡಂತಿಲ್ಲ. ಸರ್ಕಾರದ ಯೋಜನೆಗಳಲ್ಲಿ ಮಹಿಳೆಯರ ಬಗ್ಗೆ ದಿವ್ಯ ನಿರ್ಲಕ್ಷ್ಯ.. ಬಂಡವಾಳ ಹೂಡಿಕೆಯ ವಿಷಯದಲ್ಲಿ ಅಥವಾ ತಂತ್ರಜ್ಞಾನದ ವಿಷಯದಲ್ಲಿ, ಇವರಿಗೆ ಯಾವುದೇ ರೀತಿಯ ಸಹಾಯ ಒದಗಿಬಂದಿಲ್ಲ.

ಅಡ್ಡಿ ಆತಂಕ ಯಾವುದೇ ಸ್ವರೂಪದ್ದಾಗಿರಲಿ, ಹೊಂದಾಣಿಕೆ ಮಾಡಿಕೊಳ್ಳುವುದಂತೂ ಮಹಿಳೆಯರ ವಿಶಿಷ್ಟ ಸ್ವಭಾವ ತಾನೇ!? ಬದಲಾದ ಈ ಆರ್ಥಿಕ ಪರಿಸ್ಥಿತಿಗೂ ಹೊಂದಿಕೊಳ್ಳುವಂತೆ ಮಹಿಳೆಯರು ಎಂದಿನಂತೆ ತಮ್ಮದೇ ಆದ ತಂತ್ರವಿಧಾನಗಳನ್ನು ರೂಪಿಸಿಕೊಂಡಿದ್ದಾರೆ. ತಂಡಗಳನ್ನು ಕಟ್ಟಿಸಿಕೊಂಡು ಭಾರೀ ಪ್ರಮಾಣದಲ್ಲಿ ಸರಕು ಕೊಳ್ಳುತ್ತಾರೆ; ಸಾರಿಗೆ ವೆಚ್ಚ ಮುಂತಾದ ಖರ್ಚುಗಳನ್ನು ಹಂಚಿಕೊಳ್ಳುತ್ತಾರೆ. ಪುರುಷರ ಕಿರುಕುಳ ಎದುರಿಸಲು ಸಂಘಟಿತರಾಗಿದ್ದಾರೆ. ಸಾರಿಗೆ ಸೌಲಭ್ಯಗಳನ್ನು ಸರ್ಕಾರ ಒದಗಿಸಲೆಂದು ಮುಷ್ಕರ ಹೂಡಿದ್ದಾರೆ. ಕಮಿಷನ್ ಏಜೆಂಟರು ಹಾಗೂ ಅವರ ಪ್ರತಿನಿಧಿಗಳ ಸಮಕ್ಕೆ ತಮ್ಮ ಸ್ಥಾನ ಏರಿಸಿಕೊಳ್ಳಲು ಅನೌಪಚಾರಿಕ ತಂತ್ರಗಳನ್ನು ರೂಢಿಸಿಕೊಂಡಿದ್ದಾರೆ. ಹೆಸರು ಬದಲಾಯಿಸಿಕೊಳ್ಳುವುದು, ಕಮಿಷನ್ ಏಜೆಂಟರುಗಳ ಖರೀದಿ ದಾಖಲೆ ಕುರಿತು ಆಕ್ಷೇಪಣೆ. ಒಂದು ವಿಸ್ತರಿತ ಅವಧಿಯವರೆಗೆ ನಿರ್ದಿಷ್ಟ ಮಾರುಕಟ್ಟೆಯಿಂದ 'ಅದೃಶ್ಯ'ವಾಗುವುದು ಇವೆಲ್ಲ ಕೆಲವು ತಂತ್ರವಿಧಾನಗಳು.

ಏರುತ್ತಿರುವ ಒತ್ತಡಗಳು ಹಾಗೂ ಅನಾನುಕೂಲಗಳ ನಡುವೆಯೂ ಈ ಮಹಿಳೆಯರು ಗಳಿಸಿರುವ ಸಾಧನೆ ಅವರ ಬತ್ತದ ಚೇತನ ಹಾಗೂ ಕೌಶಲ್ಯಗಳಿಗೆ ದ್ಯೋತಕವಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ, ಮೀನಿನ ಸಂಪನ್ಮೂಲದ ಕೊರತೆ ಉಂಟಾಗಿರುವಾಗ, ಸಣ್ಣ ಪ್ರಮಾಣದಲ್ಲಿ ಮೀನಿನ ಮಾರಾಟ ಹಾಗೂ ಮೀನು ಹಿಡಿಯುವುದು ಎಷ್ಟರವರೆಗೆ ನಡೆದೀತು ಎಂಬುದು ಒಂದು ಬಗೆಹರಿಯದ ಪ್ರಶ್ನೆಯಾಗಿದೆ.

ಯಾವುದೇ ವಲಯದಲ್ಲಾಗಲೀ, ಬಿಕ್ಕಟ್ಟು ಉಂಟಾದಾಗ ಕೆಳಹಂತದಲ್ಲಿರುವವರೇ ಅದಕ್ಕೆ ತೀವ್ರವಾಗಿ ಬಲಿಯಾಗುತ್ತಾರೆ ಹಾಗೂ ಮಹಿಳೆಯರ ಮೇಲೆಯೇ ಹೆಚ್ಚು ಪರಿಣಾಮ ಬೀರುತ್ತದೆ. ಬೆಸ್ತ ಸಮುದಾಯವೂ ಇದಕ್ಕೆ ಹೊರತಲ್ಲ. ಇವರಿಗೆ ಜೀವನೋಪಾಯಕ್ಕೆ ಪರ್ಯಾಯ ಮಾರ್ಗಗಳೇ ಇರುವುದಿಲ್ಲ. ಇದು ಹೀಗೆಯೇ ಆಗುತ್ತದೆ. ಅಭಿವೃದ್ಧಿಯ ಚಕ್ರ ತಿರುಗುತ್ತದೆ. ಆದರೆ ಬಿಕ್ಕಟ್ಟು ಉಲ್ಬಣಗೊಳ್ಳುತ್ತದೆ. ಸುಧಾರಣಾ ಕ್ರಮಗಳೇ ಮುಳ್ಳಾಗಿ ಪರಿಣಮಿಸುತ್ತವೆ ಎಂಬುದು ವಿಪರ್ಯಾಸದ ಸಂಗತಿ.

★ ★ ★

ಮಾಧ್ಯಮದಲ್ಲಿ ಮಹಿಳೆ

ಹೀಗೊಂದು ಸುದ್ದಿ.

ಚಿತ್ರದುರ್ಗದ ಸಮೀಪ ನಿನ್ನೆ ಸಂಭವಿಸಿದ ಬಸ್ ಅಪಘಾತದಲ್ಲಿ ಮೂವರು ಮಹಿಳೆಯರು ಸೇರಿದಂತೆ ಒಟ್ಟು 8 ಜನ ಮೃತಪಟ್ಟಿದ್ದಾರೆ.

ಮೃತ ಪಟ್ಟವರನ್ನು ಸತೀಶ (18), ಗಂಗಪ್ಪ (46), ರಂಗಣ್ಣ (35), ನೀಶಾ (4), ಚೇತನ್ (3), ಚಿನ್ನಮ್ಮ (42), ಲೀಲಾವತಿ (64), ರಮಣಿ (38) ಎಂದು ಗುರುತಿಸಲಾಗಿದೆ.

ಮತ್ತೊಂದು ಸುದ್ದಿ

ಕುಂದಾಪುರದ ಭಂಡಾರ್ಕರ್ಸ್ ಕಾಲೇಜಿನಲ್ಲಿ ರಂಗಭೂಮಿ ಕಲಾವಿದೆ ಪ್ರೊ. ಲಕ್ಷ್ಮಿ ಚಂದ್ರಶೇಖರ್ ಅವರಿಂದ ಏಕವ್ಯಕ್ತಿ ರಂಗಪ್ರದರ್ಶನ ಏರ್ಪಡಿಸಿರುವುದರ ಕುರಿತು..

ಎರಡನೇ ಪ್ಯಾರಾದಲ್ಲಿ ಈ ವರದಿಯು, ರಾಜ್ಯ ಸಂಪುಟದ ವಾರ್ತಾಸಚಿವರಾದ ಪ್ರೊ. ಬಿ. ಕೆ. ಚಂದ್ರಶೇಖರ್ ಅವರ ಧರ್ಮಪತ್ನಿ ಯಾಗಿರುವ ಲಕ್ಷ್ಮಿ ಚಂದ್ರಶೇಖರ್ ಅವರು .... ಎಂದು ಮುಂದುವರೆಯುತ್ತದೆ.

ಮತ್ತೂ ಒಂದು ಸುದ್ದಿ

Mr. XYZ told 'newsmen' here today that........

ಇವು ನಾವು ನೀವು ಯಾವುದೇ ಪತ್ರಿಕೆಯಲ್ಲಿ ನಿತ್ಯ ಓದುತ್ತಿರುವ ಸುದ್ದಿಗಳ ಕೆಲವು ತುಣುಕುಗಳು. ಪತ್ರಿಕೆಯ ಮಟ್ಟಿಗೆ ಅಷ್ಟೇನೂ ಮಹತ್ವವಲ್ಲದ ಸುದ್ದಿಯ ತುಣುಕುಗಳು. ಸಾಂಪ್ರದಾಯಿಕವಾಗಿ ನೋಡಿದರೆ ಮೊದಲ ಉದಾಹರಣೆಯಲ್ಲಿ ಅಪಘಾತವಾಗಿ ಎಂಟು ಜನ ಮೃತಪಟ್ಟಿರುವುದು, ಎರಡನೇಯದರಲ್ಲಿ ನಾಟಕದ ಕಾರ್ಯಕ್ರಮ ಇರುವುದು ಹಾಗೂ ಮೂರನೆಯದರಲ್ಲಿ ಯಾರೋ ಏನೋ ಹೇಳಿರುವುದು ಮಾತ್ರ 'ಸುದ್ದಿ'. ಆದರೆ ಈಗ ನಾನು ಸುದ್ದಿಯಾಗಬೇಕೆಂದು ಬಯಸುವುದು ಈ ಮೂರು ವರದಿಗಳಲ್ಲಿ ಮನುಷ್ಯರನ್ನು ಪ್ರತ್ಯೇಕಿಸಿರುವ ಧೋರಣೆಯನ್ನು.

ಅಪಘಾತದಲ್ಲಿ ಎಂಟು ಜನ ಮೃತಪಟ್ಟಿದ್ದಾರೆ ನಿಜ. ಇವರಲ್ಲಿ ಮೂರು ಜನ ಮಹಿಳೆಯರು, ಮೂವರು ಗಂಡಸರು ಹಾಗೂ ಇಬ್ಬರು ಮಕ್ಕಳಿದ್ದಾರೆ. ಇದು ನಿಜವಾದ ಮಾಹಿತಿ. ಆದರೆ ಮೇಲಿನ ವರದಿಯ ಪ್ರಕಾರ ಮೂವರು ಮಹಿಳೆಯರು ಹಾಗೂ ಐದು 'ಜನ'ರು ಇದ್ದಾರೆ. 'ಜನ'ರು ಎಂದರೆ 'ಮನುಷ್ಯ'ರು ಎಂಬುದು ಗ್ರಹೀತ ಅರ್ಥ. ಈ ಜನರಲ್ಲಿ ಮೂವರು ಗಂಡಸರು ಹಾಗೂ ಇಬ್ಬರು ಮಕ್ಕಳಿದ್ದಾರೆ. ಅಂದರೆ ಈ ವರದಿಯ ಪ್ರಕಾರ ಇವರು 'ಮನುಷ್ಯ' ಇವರೆಲ್ಲಾ ಮೃತಪಟ್ಟ ಮನುಷ್ಯರು ಇತರ ಮೂವರು ಮಹಿಳೆಯರು ವರ್ಗಕ್ಕೆ ಸೇರಿವುದಿಲ್ಲ.!

ಈ ಉಳಿದವರಲ್ಲಿ ಇಬ್ಬರು ಮಕ್ಕಳೂ ಸೇರಿದ್ದು, ಅವರು ಜನರ ಅಥವಾ ಮನುಷ್ಯರ ಗುಂಪಿಗೆ ಸೇರುವುದಾದರೆ ಮಹಿಳೆಯರೇಕೆ ಪ್ರತ್ಯೇಕವಾಗುತ್ತಾರೆ ಎನ್ನುವುದು ಪ್ರಶ್ನೆಯಾಗಿ ಕಾಡುತ್ತದೆ.

ಸತ್ತವರ ಪಟ್ಟಿ ಕೊಡುವುದರಲ್ಲೂ ಲಿಂಗ ರಾಜಕೀಯವೇ ಎನ್ನಬೇಡಿ. ಇಲ್ಲಿನ ಪ್ರಶ್ನೆ ನಮ್ಮ ಆಲೋಚನಾ ಕ್ರಮವನ್ನು ಕುರಿತಾದದ್ದು. ಈ ಕ್ರಮ ಸತ್ತವರ ಪಟ್ಟಿಗೆ ಮಾತ್ರ ಸೀಮಿತವಲ್ಲ. ಇತರ ವರದಿಗಳಲ್ಲೂ ಇದನ್ನು ಧಾರಾಳ ಕಾಣಬಹುದು.

ಪರೀಕ್ಷೆಗಳ ಫಲಿತಾಂಶ ಪಟ್ಟಿ, ರ್‍ಯಾಂಕ್ ಪಟ್ಟಿ ಪ್ರಕಟಗೊಂಡಾಗ ಪತ್ರಿಕಾ ವರದಿಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಇಂತಹ ಅನೇಕ ಉದಾಹರಣೆಗಳು ದೊರೆಯುತ್ತವೆ. ವರದಿಗಳ ಆರಂಭದಲ್ಲಿ ಇಂತಿಷ್ಟು ಹುಡುಗರು, ಹುಡುಗಿಯರು ತೇರ್ಗಡೆಯಾಗಿದ್ದಾರೆ ಎಂದು ಬರೆದರೂ ಮುಂದುವರೆದಂತೆ, ಈ ವರ್ಷ ಪರೀಕ್ಷೆಗೆ ಕುಳಿತ ಒಟ್ಟು 2840 ವಿದ್ಯಾರ್ಥಿಗಳಲ್ಲಿ 1420 ಹುಡುಗಿಯರಿದ್ದರು. ತೇರ್ಗಡೆಯಾದ ಒಟ್ಟು 1900 ವಿಧ್ಯಾರ್ಥಿಗಳಲ್ಲಿ ಹುಡುಗಿಯರ ಸಂಖ್ಯೆ 1020... ಹೀಗೆಲ್ಲಾ ಇರುತ್ತದೆ. 2840 ವಿದ್ಯಾರ್ಥಿಗಳಲ್ಲಿ 1530 ಹುಡುಗಿಯರಾದರೆ ಉಳಿದವರು ಯಾರು? ಅದನ್ನು ವರದಿ ಹೇಳುವುದಿಲ್ಲ. ಅಥವಾ 2840 ವಿದ್ಯಾರ್ಥಿಗಳಲ್ಲಿ 1310 ಮಂದಿ ಹುಡುಗರು ಎಂದು ವರದಿ ಹೇಳುವುದಿಲ್ಲ. ವರದಿ ಮಾಡಿದವರು ಹಾಗೂ ಓದುಗರು ಆ ಉಳಿದವರು 'ಹುಡುಗರು' ಎಂದು ಗ್ರಹಿಸುತ್ತಾರೆ.

ಹೀಗೇಕೆ ಎಂದು ನಾನು ಹಲವರಲ್ಲಿ ಕೇಳಿದೆ. ಒಂದಿಬ್ಬರು ಈ ನನ್ನ ಪ್ರಶ್ನೆಯಿಂದ ಗಲಿಬಿಲಿಗೊಂಡರು. ಮತ್ತೆ ಕೆಲವರು ಇದು ರೂಢಿಯಲ್ಲಿ ಬಂದಿರುವ ಕ್ರಮ. ಇದರಲ್ಲಿ ತಾರತಮ್ಯ ಎಲ್ಲಿಯದು. 100 ರಲ್ಲಿ 50 ಹುಡುಗಿಯರೆಂದರೆ ಉಳಿದವರು ಹುಡುಗರು ಎಂದು ತಾನೇ ಅರ್ಥ. ನಿಮಗೆ ಬೇಕಿದ್ದರೆ, 100ರಲ್ಲಿ 50 ಹುಡುಗರು ಎಂದೇ ಬರೆಯಿರಿ, ಉಳಿದವರು ಹುಡುಗಿಯರು ಎಂದು ನಾವು ಅರ್ಥ ಮಾಡಿಕೊಳ್ಳುತ್ತೇವೆ. ಎಂದು ಉಪಕಾರ ಮಾಡುವ ಮಾತನಾಡಿದರು.

ಈ 'ರೂಢಿ' ಎನ್ನುವುದು ಸಮಾಜದ ಆಲೋಚನಾ ಕ್ರಮವನ್ನು ಹೇಗೆ ನಿಯಂತ್ರಿಸುತ್ತಿದೆ ಎನ್ನುವುದು ನಿಜಕ್ಕೂ ಆಘಾತಕಾರಿ.

ರಾಜ್ಯೋತ್ಸವ ಪ್ರಶಸ್ತಿ, ಅಕಾಡೆಮಿಗಳ ಪ್ರಶಸ್ತಿಗಳನ್ನು ಪ್ರಕಟಿಸುವಾಗಲೂ ಇಂತಹುದೇ ರೂಢಿಯ ಆಭಾಸಗಳು ಮರುಕಳಿಸುತ್ತವೆ. ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿ ವಿಜೇತರಾದ ಐವತ್ತಾರು ಜನರಲ್ಲಿ ಎಂಟು ಮಂದಿ ಮಹಿಳೆಯರಿರುವುದು ವೈಶಿಷ್ಟ್ಯ ಎಂದು ಬರೆಯುತ್ತಾರೆ. ಹೌದು, ಹಲವು ಸಂದರ್ಭಗಳಲ್ಲಿ ಮಹಿಳೆಯರನ್ನು ಪ್ರತ್ಯೇಕ ಗುರುಗಿಸಿ ಆ ಉಳಿದ ಜನರು ಗಂಡಸರು ಎಂದು ಹೇಳುವುದರ ಬಗ್ಗೆ ನಾವು ಚಿಂತಿಸಬೇಕಿದೆ.

ಎರಡನೆಯ ಉದಾಹರಣೆಯಲ್ಲಿ ಸುದ್ದಿ ಇರುವುದು ಪ್ರೊ. ಲಕ್ಷ್ಮೀಚಂದ್ರಶೇಖರ್ ಅವರು ಏಕವ್ಯಕ್ತಿ ರಂಗಭೂಮಿ ಪ್ರದರ್ಶನ ನೀಡುತ್ತಾರೆ ಎನ್ನುವುದರಲ್ಲಿ., ಅನಂತರ ಲಕ್ಷ್ಮೀ ಚಂದ್ರಶೇಖರ್ ಅವರ ಪರಿಚಯವನ್ನು ಈ ವರದಿ ಹೇಳುವುದು ಅವರ ಗಂಡನ ಮೂಲಕ.

ನಮಗೆಲ್ಲಾ ಪ್ರಬಂಧ ರಚನೆ ಪಾಠದಲ್ಲಿ ಯಾವ ವಿಚಾರವನ್ನು ಕುರಿತು ಪ್ರಧಾನವಾಗಿ ಹೇಳುತ್ತೇವೆಯೋ ಅದರ ಮೂಲಕವೇ ಉಳಿದ ವಿಚಾರಗಳನ್ನು ಅಥವಾ ವಿಷಯಗಳನ್ನು ಪರಿಚಯಿಸಬೇಕು ಎಂದು ಕಲಿಸಲಾಗಿದೆ. ಈ ವಿಧಾನ ಅಳವಡಿಸುವುದಾದರೆ ಪ್ರೊ. ಲಕ್ಷ್ಮೀ ಚಂದ್ರಶೇಖರ್ ಅವರ ಪರಿಚಯವನ್ನು ಮೊದಲನೆಯದಾಗಿ ಅವರ ವ್ಯಕ್ತಿತ್ವದ ಮೂಲಕ ಮಾಡಿಕೊಡಬೇಕು. ಎರಡನೆಯದಾಗಿ ಅವರ ಗಂಡ ಸಾರ್ವಜನಿಕ ವ್ಯಕ್ತಿಯಾಗಿರುವುದರಿಂದ ಅವರನ್ನೂ ಉಲ್ಲೇಖಿಸಬೇಕು. ಅದು ಹೀಗೆ - ಪ್ರೊ. ಲಕ್ಷ್ಮೀ ಚಂದ್ರಶೇಖರ್ ಅವರ ಗಂಡ ಪ್ರೊ. ಬಿ. ಕೆ. ಚಂದ್ರಶೇಖರ್ ರಾಜ್ಯ ಸಚಿವ ಸಂಪುಟದ ಸದಸ್ಯರು ಎಂದು.

ಲಕ್ಷ್ಮೀ ಚಂದ್ರಶೇಖರ್ ಅವರು ಬಿ. ಕೆ. ಚಂದ್ರಶೇಖರ್ ಅವರ 'ಧರ್ಮಪತ್ನಿ' ಯಾದ ಕಾರಣಕ್ಕೆ ರಂಗ ಪ್ರದರ್ಶನ ನೀಡುತ್ತಿಲ್ಲ. ರಂಗಭೂಮಿ ಕಲಾವಿದೆಯಾಗಿ ಈ ಪ್ರದರ್ಶನ ನೀಡುತ್ತಾರೆ. ವಿಪರ್ಯಾಸ ಎಂದರೆ, ಲಕ್ಷ್ಮಿಯವರು ನಾಡಿನ ಉದ್ದಗಲಕ್ಕೂ ನೀಡುತ್ತಿರುವ ಈ ಏಕವ್ಯಕ್ತಿ ರಂಗ ಪ್ರದರ್ಶನದ ವಸ್ತು, ಮಹಿಳೆಯರ ಸ್ವಂತ ವ್ಯಕ್ತಿತ್ವವನ್ನು ಗುರುತಿಸದಿರುವುದರ ಕುರಿತಾದದ್ದೇ.

ಇನ್ನು ಮೂರನೇ ಉದಾಹರಣೆ ಪತ್ರಕರ್ತರು ಗಣ್ಯ ವ್ಯಕ್ತಿಗಳು ನೀಡುವ ಹೇಳಿಕೆಗಳನ್ನು ಬರೆಯುವ ವಿಧಾನ ಕುರಿತಾದದ್ದು. ಕನ್ನಡದಲ್ಲಾದರೆ ಪತ್ರಕರ್ತರನ್ನುದ್ದೇಶಿಸಿ ಹೇಳಿದವರು ಎನ್ನಬಹುದು. ಆದರೆ ಇಂಗ್ಲೀಷಿನಲ್ಲಿ 'told newsmen' ಎಂದರೆ ಅಲ್ಲಿದ್ದದ್ದು ಬರಿಯ ಪುರುಷ ಪತ್ರಕರ್ತರು ಮಾತ್ರವೇ ಎಂಬ ಗುಮಾನಿ ಬರುತ್ತದೆ. ದಶಕ ದಶಕಗಳ ಹಿಂದೆ ಪತ್ರಿಕೋದ್ಯಮ ಪುರುಷರ ಏಕ ಸ್ವಾಮ್ಯವಾಗಿದ್ದು ನಿಜ. ಅಂದು 'ರೂಢಿ'ಯಲ್ಲಿ ಬಂದದ್ದು ಇನ್ನೂ ಬದಲಾಗಲಿಲ್ಲವೇಕೆ?

ಬೆಂಗಳೂರಿನಲ್ಲಿರುವ ಮಹಿಳಾ ಮಾಧ್ಯಮ ಪ್ರತಿನಿಧಿಗಳ ವೇದಿಕೆ ಸುಮಾರು ಒಂದು ದಶಕದ ಹಿಂದೆಯೇ ಈ ಪ್ರಶ್ನೆ ಎತ್ತಿತ್ತು. ಆ ಕಾಲಕ್ಕೇ ಪತ್ರಿಕೋದ್ಯಮದಲ್ಲಿ ಸಾಕಷ್ಟು ಮಹಿಳೆಯರ ಪ್ರವೇಶವಾದದ್ದರಿಂದ ಇಂತಹ ಪದಗಳ ಬಳಕೆ ಕುರಿತು ಚಿಂತಿಸಬೇಕು ಎಂದು ಎಲ್ಲಾ ಪತ್ರಿಕಾ ಸಂಪಾದಕರಿಗೆ ಪತ್ರ ಬರೆದಿತ್ತು. ಹಿರಿಯ ಪತ್ರಕರ್ತರನ್ನು ಭೇಟಿ ಮಾಡಿ ಮುಖತಃ ಮನವರಿಗೆ ಮಾಡಿಕೊಟ್ಟಿತ್ತು. newsmen ಎಂಬ ಪದದ ಬದಲಿಗೆ 'news persons' ಎಂದು ಬರೆಯಬೇಕು ಎಂದು ವೇದಿಕೆ ಕೋರಿತ್ತು. ಹಲವರಿಂದ ಉತ್ತಮ ಪ್ರತಿಕ್ರಿಯೆ ಬಂದರೂ ಕೆಲವರು ಮಾತ್ರ ತಾವು newsmen ಎಂದೇ ಬರೆಯುವುದಾಗಿ ಘೋಷಿಸಿದ್ದರು.

ಮಾಧ್ಯಮಗಳು, ಅದರಲ್ಲೂ ಮುದ್ರಿತ ಪತ್ರಿಕೆಗಳು ಮಾಡುವ ಪರಿಣಾಮ ಅಗಾಧವಾದದ್ದು. ಪತ್ರಿಕೆಗಳು ಹೇಳುವುದು ಸತ್ಯ ಹಾಗೂ ಸರಿಯಾದದ್ದು ಎಂಬ ಬಲವಾದ ನಂಬಿಕೆ ನಮ್ಮ ದೇಶದ ಶೇಕಡಾ 80ರಷ್ಟು ಓದುಗರಲ್ಲಿದೆ. ಹೀಗಿರುವಾಗ ಪತ್ರಿಕೆಗಳು ಜನ ಸಮುದಾಯದ ಆಲೋಚನಾ ಕ್ರಮವನ್ನು, ಗ್ರಹಿಕೆಯ ರೀತಿಯನ್ನು, ದೃಷ್ಟಿಕೋನವನ್ನು ಬಹುಮಟ್ಟಿಗೆ ನಿಯಂತ್ರಿಸುತ್ತದೆ ಎನ್ನುವುದು ಸತ್ಯ. ಇಂತಹ ಸಂದರ್ಭದಲ್ಲಿ ಪತ್ರಿಕೆ ಪ್ರಕಟಿಸುವ ವರದಿಗಳಲ್ಲಿ, ಬಳಸುವ ಶಬ್ದದಲ್ಲಿ, ನೀಡುವ ದೃಷ್ಟಿಕೋನದಲ್ಲಿ ಯಾವುದೇ ರೀತಿಯ ಪ್ರತ್ಯೇಕತೆ ಅಥವಾ ತಾರತಮ್ಯ ನುಸುಳದಂತೆ ಎಚ್ಚರಿಕೆ ವಹಿಸಬೇಕಾದ್ದು ಅಗತ್ಯ.

ಯಾವುದೇ 'gender tab' ಹಚ್ಚಿಕೊಳ್ಳದ ರಾಜ್ಯಪಾಲ, ಅಧ್ಯಕ್ಷ, ಪ್ರಾಂಶುಪಾಲ ಎಂಬ ಪದವಿಗಳಿಗೆ ಮಹಿಳೆಯರು ನೇಮಕವಾದಾಗ ಆ ಪದವಿಗಳನ್ನು ರಾಜ್ಯಪಾಲೆ, ಅಧ್ಯಕ್ಷೆ, ಪ್ರಾಂಶುಪಾಲೆ ಎಂದೆಲ್ಲ ರೂಪಾಂತರ ಮಾಡುವುದನ್ನು ನೋಡಿದರೆ ಈ ಪದವಿಗಳನ್ನೆಲ್ಲ ಕೇವಲ ಗಂಡಸರನ್ನು ಮಾತ್ರ ಗಮನದಲ್ಲಿಟ್ಟುಗೊಂಡು ರೂಪಿಸಲಾಗಿತ್ತೆ ಎಂಬ ಶಂಕೆ ಮೂಡುತ್ತದೆ.

ಹೀಗೆ ಮಾಡುವ ಮಾಧ್ಯಮಗಳು ನಾಳೆ ರಾಷ್ಟ್ರಪತಿ ಸ್ಥಾನಕ್ಕೆ ಮಹಿಳೆ ಬಂದರೆ ಅವರನ್ನು ರಾಷ್ಟ್ರಪತ್ನಿ ಎಂದು ಕರೆಯುತ್ತವೆಯೇ? ಅತ್ಯಂತ ಸಣ್ಣ ವಿಷಯವಾಗಿ ಕಾಣುವ ಇವುಗಳು ಒಂದು ಜನಾಂಗದ ದೃಷ್ಟಿಕೋನವನ್ನು ರೂಪಿಸುತ್ತದೆ ಎಂಬುದನ್ನು ಮರೆಯಲಾಗದು.

- ಸತ್ಯಾ .ಎಸ್

ಕೃಪೆ: ಜನವಾಹಿನಿ

ಪ.ಜಾ/ಪ.ಪಂ ದವರ ಅಭ್ಯುದಯಕ್ಕೆ ಹೊಸ ಆಯಾಮ
ಸಮೂಹ ಮಾಧ್ಯಮ ಕ್ಷೇತ್ರದಲ್ಲಿ - ಮೂರು ವಿನೂತನ ಯೋಜನೆಗಳ ಕೊಡುಗೆ

ರಾಜ್ಯದ ಸಮೂಹ ಮಾಧ್ಯಮ ಕ್ಷೇತ್ರದಲ್ಲಿನ ಇತ್ತೀಚಿನ ಬೆಳವಣಿಗೆಗಳನ್ನು ರಾಜ್ಯದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರ ಮನೆ ಬಾಗಿಲಿಗೆ ಕೊಂಡೊಯ್ದು ಅವರು ಅವುಗಳ ಪ್ರಯೋಜನ ಪಡೆದು ಅಭಿವೃದ್ಧಿ ಸಾಧಿಸಲೆಂಬ ಸದಾಶಯದೊಂದಿಗೆ ರಾಜ್ಯ ವಾರ್ತಾ ಇಲಾಖೆ ಮಾಧ್ಯಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮೂರು ವಿನೂತನ ಯೋಜನೆಗಳನ್ನು ರೂಪಿಸಿದೆ.

1. ಪ.ಜಾ / ಪ.ಪಂ ಕಾಲೋನಿಗಳಿಗೆ ಬಣ್ಣದ ದೂರದರ್ಶನ :- ರಾಜ್ಯಾದ್ಯಂತ 200 ಪ.ಜಾ / ಪ.ಪಂ ಕಾಲೋನಿಗಳಿಗೆ ಬಣ್ಣದ ದೂರದರ್ಶನ ಸೆಟ್‌ಗಳ ಒದಗಿಸುವಿಕೆ. ದೂರದರ್ಶನ ಕಾರ್ಯಕ್ರಮ ವೀಕ್ಷಿಸುವುದರೊಂದಿಗೆ ಸರ್ಕಾರದ ವಿವಿಧ ಯೋಜನೆಗಳ ಕುರಿತು ಸಮುದಾಯದಲ್ಲಿ ಜಾಗೃತಿ ಮೂಡಿಸಲು ಇದರಿಂದ ಸಾಧ್ಯ. ಅಲ್ಲದೆ ಸಾಮಾನ್ಯ ಜ್ಞಾನಕ್ಕೆ ಪೂರಕ.

2. ಮಾಧ್ಯಮ ಕೇಂದ್ರ : - ಜಿಲ್ಲಾ ಕೇಂದ್ರಗಳಲ್ಲಿ ಪೂರ್ಣ ಪ್ರಮಾಣದ ಮಾಧ್ಯಮ ಕೇಂದ್ರ ಸ್ಥಾಪನೆಗೆ ಪ.ಜಾ / ಪ.ಪಂ ಅಭ್ಯರ್ಥಿಗಳಿಗೆ ಕರ್ನಾಟಕ ಸರ್ಕಾರದ ನೆರವು. ಈ ಮಾಧ್ಯಮ ಕೇಂದ್ರಗಳಿಂದ ಸಣ್ಣ ಮತ್ತು ಮಧ್ಯಮ ಪ್ರಮಾಣದ ವೃತ್ತ ಪತ್ರಿಕೆಗಳಿಗೆ ಬೆಂಬಲ ನೀಡಿಕೆ, ಮಾಧ್ಯಮ ಕೇಂದ್ರಗಳು ಕಂಪ್ಯೂಟರ್, ಲೇಸರ್ ಪ್ರಿಂಟರ್, ಫ್ಯಾಕ್ಸ್ ಯಂತ್ರ ಮತ್ತು ಸುದ್ದಿ ಸಂಸ್ಥೆಗಳ ಸಂಪರ್ಕ ಫೋಟೋಕಾಪಿಯರ್‌ನಂತಹ ಮೂಲಭೂತ ಸೌಲಭ್ಯಗಳನ್ನು ಒಳಗೊಂಡಿರುವುದು. ಸರ್ಕಾರ ಪ್ರಥಮ ಹಂತವಾಗಿ ಬೀದರ್, ಬೆಳಗಾವಿ, ಮೈಸೂರು, ಉಡುಪಿ ಮತ್ತು ಕೋಲಾರ ಜಿಲ್ಲೆಗಳಲ್ಲಿ ಈ ಮಾಧ್ಯಮ ಕೇಂದ್ರಗಳನ್ನು ಸ್ಥಾಪಿಸಲಿದೆ.

3. ವಿದ್ಯಾರ್ಥಿ ವೇತನ ಕಾರ್ಯಕ್ರಮ :- ಆಯ್ದ ಸಂಸ್ಥೆಗಳಲ್ಲಿ ಪತ್ರಿಕೋದ್ಯಮ ಸಮೂಹ ಮಾಧ್ಯಮ ಶಿಕ್ಷಣ ಪಡೆಯಬಯಸುವ ಪ್ರತಿಭಾವಂತ ಪ.ಜಾ./ಪ.ಪಂ ವಿದ್ಯಾರ್ಥಿಗಳ ಶಿಕ್ಷಣ ವೆಚ್ಚವನ್ನು ಭರಿಸಲಾಗುವುದು.

ಆಯ್ದ ಶಿಕ್ಷಣ ಸಂಸ್ಥೆಗಳು :-

1. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮಾಸ್ ಕಮ್ಯುನಿಕೇಶನ್, ನವದೆಹಲಿ,
2. ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಕಮ್ಯುನಿಕೇಶನ್, ಮಣಿಪಾಲ್.
3. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಜರ್ನಲಿಸಂ ಅಂಡ್ ನ್ಯೂಮೀಡಿಯಾ, ಬೆಂಗಳೂರು
4. ಏಷ್ಯನ್ ಮೀಡಿಯಾ ಇನ್‌ಸ್ಟಿಟ್ಯೂಟ್, ಚೆನ್ನೈ.

- ಕರ್ನಾಟಕ ವಾರ್ತೆ

ಗ್ರಾಹಕರ ಹಕ್ಕಿಗೆ ಹೋರಾಡಿದ ಜೂಲಿಯಾ

ಅಮೇರಿಕಾದ ಒಂದು ಪುಟ್ಟ ಹಳ್ಳಿ. ಅಲ್ಲಿ ಒಂದೇ ದಿನ ಹತ್ತು ಮಕ್ಕಳು ವಾಂತಿ, ಭೇದಿ, ಜ್ವರ ಕಾರಣಕ್ಕೆ ಆಸ್ಪತ್ರೆ ಸೇರಿದರು. ಕೆಲವೇ ದಿನಗಳಲ್ಲಿ ನಾಲ್ಕು ಮಕ್ಕಳು ಸತ್ತೇ ಹೋದರು. ಉಳಿದವರಿಗೂ ಕಿಡ್ನಿ ಸಮಸ್ಯೆ, ಬೆನ್ನು ಹುರಿ ಸಮಸ್ಯೆ ಹೀಗೆ ಬದುಕಿಗೆ ಭಾರವಾಗುವ ಸಮಸ್ಯೆಗಳೇ ಉಳಿದವು. ಆಸ್ಪತ್ರೆಯೇನೋ 'ಫುಡ್ ಪಾಯ್ಸನ್' ಎಂದು ಕಾರಣ ನೀಡಿ ಸುಮ್ಮನಾಯಿತು.

ಮೊಟ್ಟ ಮೊದಲು ತನ್ನ ಆರುವರ್ಷದ ಮಗನನ್ನು ಕಳೆದುಕೊಂಡ ಜೂಲಿಯಾ ತನ್ನ ಮಗನಂತೆ ಉಳಿದ ಮಕ್ಕಳು ಸಾಯಬಾರದೆಂದು ಎಚ್ಚೆತ್ತು ಕೊಂಡು ದೂರದ ಪಟ್ಟಣಕ್ಕೆ ಧಾವಿಸಿ, ಇದರ ಆಮೂಲಾಗ್ರ ಪರಿಶೋಧನೆಯಾಗಲೇ ಬೇಕೆಂದು ಆಗ್ರಹಿಸಿದಳು. ಇಂಥ ಕೇಸ್‌ಗಳನ್ನು ಶೋಧಿಸುವ ಪ್ರಸಿದ್ಧ ಸಂಸ್ಥೆಯ ಮೊರೆ ಹೊಕ್ಕಳು. ಶೋದನೆ ಪ್ರಾರಂಭವಾಯಿತು.

ಹಲವು ನೂರು ಮನೆಗಳಿರುವ ಚಿಕ್ಕ ಹಳ್ಳಿ ಅದು. ಅಲ್ಲಿಯ ಆಸ್ಪತ್ರೆಯ ಪ್ರಯೋಗಾಲಯವೂ ಸೀಮಿತ ಸಲಕರಣೆಗಳುಳ್ಳದ್ದು. ಆದ್ದರಿಂದ ಸತ್ತ ಮತ್ತು ಬದುಕಿಯೂ ಅನುಭವಿಸುತ್ತಿರುವ ಮಕ್ಕಳ ರಕ್ತ, ಮತ್ತಿತರ ಟೆಸ್ಟ್‌ಗಳನ್ನು ಮತ್ತ ಪಟ್ಟಣದ ಪ್ರಯೋಗಾಲಯದಲ್ಲಿ ವಿವಿಧ ಹಂತಗಳಲ್ಲಿ ವಿವಿಧ ರೀತಿಗಳಲ್ಲಿ ನಡೆಸಲಾಯಿತು. ಈ ಮಕ್ಕಳ ಸಾವು ಮತ್ತು ರೋಗಕ್ಕೆ ಕಾರಣ ಒಂದು ವಿಶಿಷ್ಟ ಬಗೆಯ ರೋಗಾಣು ಸೃಷ್ಟಿಸುವ ವೈರಾಣು ಎನ್ನುವುದು ಪತ್ತೆಯಾಯಿತು. ಈ ವೈರಾಣುವಿನಿಂದ ಹುಟ್ಟಿದ ರೋಗಾಣು ದೇಹದೊಳಗಿರುವ ಜೀವಾಣುಗಳನ್ನೆಲ್ಲ ಅತಿವೇಗವಾಗಿ ಧ್ವಂಸ ಮಾಡುತ್ತದೆ. ದೇಹವನ್ನು ಸಾವು ಅಥವಾ ಇತರ ಬರ್ಬರ ರೋಗಕ್ಕೆ ತಳ್ಳುತ್ತದೆ. ಸೋಜಿಗದ ವಿಷಯವೆಂದರೆ ಈ ವೈರಾಣುವಿನ ಶಕ್ತಿ 10,14 ವರ್ಷದ ಮಕ್ಕಳ ದೇಹದಲ್ಲಿ ಮಾತ್ರ ವಿಕಸಿತಗೊಳ್ಳುತ್ತದೆ.

ಮುಂದಿನ ಪರೀಕ್ಷೆ ಈ ವೈರಾಣುಗಳು ಎಲ್ಲಿಂದ ಮಕ್ಕಳ ದೇಹದೊಳಕ್ಕೆ ಪ್ರವೇಶಿಸಿದವು ಎನ್ನುವುದು. ಇದು ಬಹಳ ಬೇಗ ಪತ್ತೆಯಾಯಿತು. ಈ ದುರ್ದೈವಿ ಮಕ್ಕಳು ಶಾಯಿಲೆ ಬೀಳುವ ವಿವಿಧ ದಿನಗಳ ಅಂತರದಲ್ಲಿ ಒಂದು ಪ್ರಸಿದ್ಧ ಕಂಪನಿ ಉತ್ಪಾದಿಸುವ 'ಆಪಲ್‌ಜ್ಯೂಸ್' ಕುಡಿದಿದ್ದರು. ಈ ಕಂಪನಿ ಮಕ್ಕಳನ್ನು ಆಕರ್ಷಿಸಲು ತನ್ನ ಜ್ಯೂಸ್ ಡಬ್ಬಗಳ ಮೇಲ ವಿವಿಧ ರಂಗಿನ ಹೊದಿಕೆ ಹಾಕಿರುತ್ತದೆ. ಇದನ್ನೂ ಪತ್ತೆ ಮಾಡಿದವಳು ಜೂಲಿಯಾಳೇ. ಅದೊಂದು ದಿನ ತನ್ನ ಮಗ ಅಂಥ ಜ್ಯೂಸ್ ಡಬ್ಬಿ ಕೊಂಡಾಗ ಈಗ ಆಸ್ಪತ್ರೆಯಲ್ಲಿ ನರಳುತ್ತಿರುವ ಮಗುವೊಂದು ತನಗೂ ಅಂಥದೇ ಡಬ್ಬ ಬೇಕೆಂದು ಹಠ ಮಾಡಿ ಕೊಂಡಿದ್ದನ್ನು ಸ್ಮರಿಸಿ ಕೊಂಡಳು. ಈ ನೆನಪು ಮುಂದಿನ ತಪಾಸಣೆಗೆ ನೆರವಾಯಿತು.

ಶೋಧನಾ ತಂಡ ಪ್ರಸಿದ್ಧ ಕಂಪನಿಗೆ ಧಾಳಿಯಿಟ್ಟಿತು. ಅಲ್ಲಿದ್ದ ಎಲ್ಲ ಬಗೆಯ ಆಪಲ್ ಜ್ಯೂಸ್‌ಗಳನ್ನೂ ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸಲಾಯಿತು. ವಿಚಿತ್ರವೆಂದರೆ ಯಾವೊಂದು ಸ್ಯಾಂಪಲ್‌ಗಳಲ್ಲೂ ಅವರು ಹುಡುಕುತ್ತಿದ್ದ ವೈರಾಣುಗಳ ಪತ್ತೆಯೇ ಆಗಲಿಲ್ಲ. ಶೋಧನಾ ತಂಡ ಕೈಚೆಲ್ಲಿ ಕುಳಿತಿತು. ಜೂಲಿಯಾ ಹತಾಶಳಾದಳು. ಆದರು ಅವಳ ಒಳ ಶಕ್ತಿ ಮಿಡಿಯುತ್ತಲೇ ಇತ್ತು. ಈ ವೈರಾಣುಗಳ ಬೇರುಗಳನ್ನು ಹೇಗೆ ಕಂಡು ಹಿಡಿಯುವುದು? ಪಾಶ್ಚಾತ್ಯರು ತಾವು ಬಳಸಿದ ನಂತರ ಖಾಲಿಯಾದ ಡಬ್ಬಗಳನ್ನು ತಕ್ಷಣವೇ ಬಿಸಾಡಿ ಬಿಡುತ್ತಾರೆ ಪ್ರತಿದಿನ ಒಯ್ಯುವವರು ಗಾರ್ಬೇಜ್‌ಗೆ ಹಾಕಿದ ನಂತರ ಅದು ಕೆಲವೇ ಕ್ಷಣಗಳಲ್ಲಿ ಪುಡಿ ಪುಡಿಯಾಗುವುದರಿಂದ, ಈ ಹಳೆಯ ಡಬ್ಬದ ಜಾಡನ್ನು ಹಿಡಿಯುವುದು ಜೂಲೀಯಾಳಿಗೆ ನಿಜಕ್ಕೂ ಪ್ರಯಾಸವೇ ಆಯಿತು. ಆದರೆ ಆಕೆ ತನ್ನ ಪ್ರಯತ್ನಬಿಟ್ಟು ಕೊಡಲಿಲ್ಲ. ಆ ಹಳ್ಳಿಯ ಮನೆ ಮನೆಗಳಲ್ಲಿ ಸರ್ವೆ ಮಾಡಿದಳು. ಪ್ರಾಮಾಣಿಕ ಪ್ರಯತ್ನಕ್ಕೆ ಎಲ್ಲೋ ಒಂದು ಕಡೆ ಯಶಸ್ಸು ಅನ್ನುವ ಆಶಾಕಿರಣ ಇದ್ದೇ ಇರುತ್ತದೆ. ಜೂಲಿಯಾಗೆ ಒಂದು ಮನೆಯ ಫ್ರಿಜ್‌ನಲ್ಲಿ ತಾನು ಕೊಂಡ ದಿನವೇ ಕೊಂಡು ಕೊಂಡ, ಅದೇ ಪ್ರಸಿದ್ಧ ಆಪಲ್ ಜ್ಯೂಸ್ ಡಬ್ಬ ಸಿಕ್ಕಿತು. ಅದರ ಮೇಲೆ ಮುದ್ರಿತ ವರದಿಯಲ್ಲಿ ಉಪಯೋಗಿಸಬಹುದಾದ ಅವಧಿ ಇನ್ನೂ ಆರು ತಿಂಗಳವರೆಗಿತ್ತು. ಆ ಡಬ್ಬದ ಜ್ಯೂಸ್‌ನಲ್ಲಿ ವೈರಾಣುಗಳು ಪತ್ತೆಯಾದವು.

ಶೋಧನಾ ತಂಡ ಈ ಅವಗಢದ ಸಂಪೂರ್ಣ ತಪ್ಪನ್ನು ಪ್ರಸಿದ್ಧ ಕಂಪನಿಗೆ ಹೊರಿಸಿ ಬಿಟ್ಟಿತು. ಇದು ಆ ಪ್ರಸಿದ್ಧ ಕಂಪನಿಯ ಪ್ರಸಿದ್ಧಿ ಪ್ರಶ್ನೆಯಾಗಿತ್ತು. ಗೌರವದ ಪ್ರಶ್ನೆಯಾಗಿತ್ತು ಮತ್ತು ಅದರ ಉಳಿದ ಪ್ರಾಡೆಕ್ಟ್‌ಗಳ ಉಳಿವಿನ, ಅಳಿವಿನ ಪ್ರಶ್ನೆಯಾಗಿತ್ತು. ಆದ್ದರಿಂದ ಆ ಕಂಪನಿ ತನ್ನದೇ ಆದ ಮತ್ತೊಂದು ಶೋಧನೆಯನ್ನು ಪ್ರಾರಂಭಿಸಿತು. ಮೊದಲ ಗುಮಾನಿಗಳು 'ಆಬ್ಯಾಚ್' ಸಿದ್ಧ ಪಡಿಸಿದ ನೌಕರರ ಮೇಲೆ, ಅದರ ಜವಾಬ್ದಾರಿ ಹೊತ್ತ ಅಧಿಕಾರಿಗಳ ಮೇಲೆ ಹರಿಯಿತು. ಇಲ್ಲಿ ಯಾವ ನ್ಯೂನತೆಗಳೂ ಕಾಣಲಿಲ್ಲ. ಹೀಗೆ ಮುಂದುವರಿದ ಶೋಧನೆ ಆ ಕಂಪನಿಗೆ ಒದಗಿಸುವ ಸೇಬು ತೋಟದ ಕಡೆ ಹರಿಯಿತು.

ಅಲ್ಲಿ 'ಬೇಜವಾಬ್ದಾರಿ' ಎನ್ನುವ ಕಳ್ಳ ಪತ್ತೆಯಾದ. ಆತೋಟದ ಮಾಲಿಕ ನೆಲಕ್ಕೆ ಬಿದ್ದ ಸೇಬುಗಳನ್ನು ಆರಿಸಿ ರವಾನಿಸುತ್ತಿದ್ದ. ಹಾಗೆ ರವಾನಿಸಲ್ಪಟ್ಟ ಹಣ್ಣುಗಳಲ್ಲಿ ಕೆಲವು ಮಾತ್ರ

ಇಂಥ ವೈರಾಣುಗಳನ್ನು ಹೊಂದಿರಬಹುದಾದ ಸಾಧ್ಯತೆ ಇತ್ತು. ಏಕೆಂದರೆ ಮರಗಳ ಕೆಳಗಿನ ಮಣ್ಣು ಮತ್ತು ಗೊಬ್ಬರ ಮಿಶ್ರಣವನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದಾಗ ಒಂದೇ ಒಂದು ಮರದ ಕೆಳಗಿನ ಮಿಶ್ರಣದಲ್ಲಿ ಈ ವೈರಾಣುಗಳ ಪತ್ತೆಯಾಯಿತು.

ಅಂತೂ ಜೂಲಿಯಾ ಜಯಶಾಲಿಯಾದಳು. ಕೋರ್ಟು ತೋಟದ ಮಾಲೀಕನಿಗೆ ಹಾಗೂ ಬೇಜವಾಬ್ದಾರಿಯ ಕಾರಣಕ್ಕೆ ಜ್ಯೂಸ್ ಕಂಪನಿಗೆ ಮತ್ತು ಅದನ್ನು ಮಾರಿದ ಅಂಗಡಿಗೆ, 1.9 ಮಿಲಿಯನ್ ಡಾಲರ್‌ಗಳ ದಂಡ ವಿಧಿಸಿತು. ಇದು ಇಡೀ ಅಮೆರಿಕಾದಲ್ಲೇ ಅತಿ ಹೆಚ್ಚಿನ ದಂಡ ಎನ್ನುವ ಕುಖ್ಯಾತಿಗೆ ಒಳಗಾಗಿಯಿತು. ಜೂಲಿಯಾಳೂ ಸೇರಿದಂತೆ ಆ ನತದೃಷ್ಟ ಮಕ್ಕಳಿಗೆ ಮತ್ತು ಅಳಿದ ಮಕ್ಕಳ ಕುಟುಂಬಕ್ಕೆ ಪರಿಹಾರಧನ ದೊರಕಿತು. ಜೂಲಿಯಾ ತನ್ನ ಪಾಲಿನ ಧನವನ್ನು ಅರ್ಹ ಮಕ್ಕಳ ಅಭ್ಯುದಯ ನಿಧಿಗೆ ಸಮರ್ಪಿಸಿ ಬಿಟ್ಟಳು. ಪತ್ರಿಕೆಗಳು ಜೂಲಿಯಾ ಸಾಹಸವನ್ನು ಕೊಂಡಾಡಿದವು. ಒಂದು ಪುಟ್ಟ ಹಳ್ಳಿಯ ಜೂಲಿಯಾ ಪಟ್ಟಣದಲ್ಲಿ 'ದಿಟ್ಟ ಮಹಿಳೆ' ಎನ್ನುವ ಅಭಿದಾನಕ್ಕೆ ಪಾತ್ರಳಾದಳು.

ನಮ್ಮ ಮನೆಯ ಹತ್ತಿರವೂ ಇಂಥದೇ ಒಂದು ಘಟನೆ ನಡೆಯಿತು. ರಾಜಾಜಿನಗರದ ಒಂದು ಅಂಗಡಿಯಿಂದ ಒಂದು ಪ್ರಸಿದ್ಧ ಕಂಪನಿಯ ತಿನಿಸನ್ನು ತಂದು ತಿಂದ ಕುಟುಂಬ ಮರುದಿನವೇ ಆಸ್ಪತ್ರೆ ಸೇರ ಬೇಕಾಯಿತು. ಗಂಡ ಹೆಂಡತಿ ಎರಡು ಪುಟ್ಟ ಮಕ್ಕಳ ಈ ಕುಟುಂಬ ಬಹಳ ಸಂಕಷ್ಟವನ್ನು ಎದುರಿಸಿದರು. ಕೊನೆಯ ಮೂರು ವರ್ಷದ ಮಗುವಂತೂ ಜೀವನ್ಮರಣಗಳ ನಡುವೆ ತೂಗುಯ್ಯಾಲೆಯಾಡಿ ಅಂತೂ ಬದುಕಿತು. ಇದಕ್ಕೆ ಕಾರಣ ವಿಷಯುಕ್ತ ಆಹಾರ ಎಂದು ತಿಳಿದರೂ ಜೀವಗಳಿಗೆ ಬೆಲೆಯೇ ಇಲ್ಲದ ಈ ದೇಶದಲ್ಲಿ ಶೋಧನೆ ಎನ್ನುವ ಕನಸನ್ನು ಕಾಣಲೇಬಾರದು. ಆದರು ಸ್ವಲ್ಪ ರೋಷದಿಂದ ಈ ಗೃಹಿಣಿ ತಾವು ಕೊಂಡ ಅಂಗಡಿಗೆ ಹೋಗಿ ತಮಗಾದ ದುರವಸ್ಥೆಯ ಬಗ್ಗೆ ತಿಳಿಸಿದರು. ಅಂಗಡಿಯಾತ ಒಂದಿಷ್ಟೂ ವಿಚಲಿತನಾಗಲಿಲ್ಲ. ಬದಲಿಗೆ ದಬಾಯಿಸಿ ಬಿಟ್ಟ ''ಹೋಗ್ರಿ, ಹೋಗ್ರಿ, ನಿಮಗೆ ನಮ್ಮಂಗಡಿ ಚಿಪ್ಸ್ ತಿಂದೇ ಹೀಗಾಯ್ತು ಅನ್ನಕ್ಕೆ ಏನ್ ಗ್ಯಾರಂಟಿ ಇದೆ. ಅವತ್ ನೀವು ಇನ್ನೂ ಏನೇನ್ ತಿಂದಿದ್ರೋ''

ನಿಜ. ಇದು ಈ ದೇಶದ ದುರಂತ. ಏಕೆಂದರೆ ಇಲ್ಲಿ ಜೀವಕ್ಕೆ ಬೆಲೆ ಇಲ್ಲ. ಭದ್ರತೆಯೂ ಇಲ್ಲ. ಹುಟ್ಟು, ಸಾವು, ಆಯುಷ್ಯ, ಆರೋಗ್ಯ ಎಲ್ಲವನ್ನೂ ವಿಧಿಯ ಕೈಗೆ ಒಪ್ಪಿಸಿ 'ಹಣೆಬರಹ'ದ ಅಡಿಯಲ್ಲಿ ಬಾಳುವವರು ನಾವು. ನಮಗೇಕೆ 'ಇನ್‌ವೆಸ್ಟಿಗೇಶನ್' ಎನ್ನುವಂಥ ಭಾರದ ಪದ ಪ್ರಯೋಗ!?

- ***ಶಾಂತಾನಾಗರಾಜ್***

★ ★ ★

RNI No. 45577/88

"Achala" 108, Skyline Surabhi,
14-9, Vidyapeeta Road, BSK III Stage,
Bangalore - 560 085

To :

Smt/Sri

CPMG/KA/BG-8/2001
Book-Post/News Letter